Reg. No. M. 155.

"If not delivered please return to "KODAGU" OFFICE MERCARA.

ಕೊಡಗು.

ಸರ್ವೇಷಾ ಭೂತದಯಯೂ ವಿದ್ಯಾ-ಪ್ರೀತಿ ಪರಂಪ್ಪರಾ ಜಕ್ಕವಂಶೀಕ ದೇಶಾನಾಂ ಸುಸ್ಥಿರಾ ರಾಜ ಸಂಪದಾ

ವಾರ್ಷಿಕ ಚಂದಾ ರೂ. ೩—೪—೦. ಸಂಪಾದಕ—ಪಂದ್ಯಂಡ ಜಿ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೩ನೇ ಇಸವಿ ಡಿಸಂಬರ್ ತಾರೀಕು ೨ ನೇ ಶುಕ್ರವಾರ. | ಸಂಚಿಕೆ ೨೬

SARI-PIN.

EAR-RINGS.
(Thodus) :
Cut-rubys Rs. 25 to 50
With diamond in centre Rs. 80 to 120

BRACELETS.

Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS

Attractive and inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in

Silver Guindys, Photo lockets, Dimond nose-screws cut-ruby ear-rings. etc., etc, etc, in all prices. Very attractive Prices most moderate.

Estimates free on enquiry.

Designs free on enquiry.

V. Subramaniar Jeweller,

Telegrams: 'PRECIOUS.'

Telephone: 3145.

CATALOGUE ON ENQUIRY.

Post Box 423, Triplicane, P. O., MADRAS.

52—2

SANOFEL

ಇದನ್ನೋಷ್ಟೆಲೆಯನ್ನು ಉಪಯೋಗಿಸಿ ಮಲೇರಿಯಾಕ್ಕೆ ಪರಿಹಾರ ಪಡೆಯಿರಿ. ಎಲ್ಲಾ ಮಲೇರಿಯಾ ಜ್ವರಗಳಿಗೂ ಇದು ಒಳ್ಳೆಯ ಮದ್ದು. ಇದು ಎಲ್ಲಾ ಮಲೇರಿಯ ಔಷಧಿಗಳಿಗಿಂತಲೂ ಒಳ್ಳೆಯದೆಂದು ಪ್ರಸಿದ್ಧ ವೈದ್ಯರು ಹೇಳಿದ್ದಾರೆ. ಹಳೇ ಜ್ವರಕ್ಕೂ ಒಳ್ಳೆಯ ಗುಣಕಾರಿ.

USE FOR MALARIA

SOLE AGENTS GORIO LTD. P.O. BOX 159, BOMBAY

AVAILABLE AT ALL CHEMISTS

26—23

EMPIRE OF INDIA
Life Assurance Company, Limited.
Established 1897.

INTERIM BONUS on Policies becoming claims before 1st March 1934 INCREASED TO

Rs. 16 per annum per Rs. 1000/— Assured on Whole Life Assurances.

and

Rs. 14 per annum per Rs. 1000/— Assured on Endowment Assurances.

Head Office:—
EMPIRE OF INDIA LIFE BUILDING,
Bombay

Branch Office:—
152/3, COMMERCIAL STREET,
Bangalore.

52—9

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಆ ಜ ನ್ಮ ರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೊಲ್ಟಟ್ಟ ವರ್ಷಾದಾಯ	ಮೊಲ್ಟಟ್ಟ ಮೂಲಧನ	ಖರ್ಚು ವಂಚನಾದ ಶೇಕಡ
1911	46,248	49 442	82.9
1921	2,92,627	6,53,350	43 2
1931	12,50,000	4 ,00 000	28.2

ಬೋನಸ್ಸು.

ಕುರ್ಚು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಜೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪಕ್ಷವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಸೌಯೋಜನೆ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಒಳ,

52—32

ಕೊಡಗು.

ಸನ್ ೧೯೩೦ನೇ ಇಸವಿ

ಡಿಸೆಂಬರ್ ತಾ. ೭ ನೇ ಶುಕ್ರವಾರ.

ಪ್ರೆಸ್ ಆರ್ಡಿನೆನ್ಸ್

ಜಾರಿಯಲ್ಲಿರುವವರೆಗೆ

ನಾವು

ಅಗ್ರಲೇಖನ

ನನ್ನು

ಪ್ರಕಟಿಸುವುದಿಲ್ಲ.

ಹರಿಜನರ ಕರ್ತವ್ಯ.

ಅಸ್ಪೃಶ್ಯತಾನಿವಾರಣೆ ಕಾರ್ಯಕ್ಕೆ ಹರಿಜನರು ಯಾವ ರೀತಿಯಲ್ಲಿ ಸಹಾಯಮಾಡಬಹುದು ಎಂತ ಶ್ರೀ. ರಾಜಭೋಜ ಮುಂತಾದವರು ಕೇಳಿದರು. ಹರಿಜನರಲ್ಲಿ ಹೆಚ್ಚಿನವರು ಇರುವ ಹೀನಾವಸ್ಥೆಗೆ ಜಾತಿ ಹಿಂದೂಗಳೇ ಜವಾಬ್ದಾರರೆಂತಲೂ ಅಸ್ಪೃಶ್ಯತಾ ನಿವಾರಣೆಯಾದ ಒಡನೇ ಅವರ ಸ್ಥಿತಿಯು ಉತ್ತಮವಾಗುವುದರಲ್ಲಿ ಸಂಶಯವಿಲ್ಲವೆಂತಲೂ ಬಲವಾದ ಮಾತುಗಳಿಂದ ಮೊದಲೇ ಹೇಳಿರುತ್ತೇನೆ. ಪರಿಶುದ್ಧರಾದ ನಂತರ ಅಸ್ಪೃಶ್ಯತಾನಿವಾರಣೆ ಮಾಡುವುದೆಂತ ಹೇಳಬಾರದು. ಆದರೂ ಈಗಿನ ವಿದ್ಯಮಾನಗಳಲ್ಲಿ ಸಾಧ್ಯವಿರುವಷ್ಟು ಮಟ್ಟಿಗೆ ಹರಿಜನರು ತಮ್ಮನ್ನು ತಾವೇ ಸುಧಾರಿಸಿಕೊಳ್ಳಬೇಕು.

ಆದ್ದರಿಂದ ಹರಿಜನ ಕೆಲಸಗಾರರು ತಮ್ಮ ಎಲ್ಲಾ ಶಕ್ತಿಯನ್ನೂ ಈ ಕೆಳಗಿನ ಕಾರ್ಯಗಳಿಗೆ ಉಪಯೋಗಿಸಬೇಕು. (1) ಹರಿಜನರೊಳಗೆ ಶುಚಿಯೂ ಆರೋಗ್ಯದ ಅನುಕೂಲಗಳೂ ಹೆಚ್ಚುವಂತೆ ಮಾಡುವುದು. (2) ಅಶುಚಿಯೆನಿಸಿಕೊಳ್ಳುವ ತೋಟಿ ಮತ್ತು ಚಕ್ಕಳ ಹದಬರಿಸುವ ಕೆಲಸಗಳನ್ನು ಸುಧಾರಿಸಿಕೊಳ್ಳುವುದು. (3) ಮಾಂಸವನ್ನು ಪೂರ್ತಿಯಾಗಿ ಅಲ್ಲದಿದ್ದರೂ ಸತ್ತ ದನಗಳ ಮತ್ತು ಗೋಮಾಂಸವನ್ನು ತಿನ್ನುವುದನ್ನು ಬಿಡುವುದು. (4) ನಿಷಾಸೇವನೆಯನ್ನು ಬಿಡುವುದು. (5) ಹುಡುಗರನ್ನು ಶಾಲೆಗೆ ಕಳುಹಿಸುವಂತೆ ಬೋಧಿಸುವುದು, ಆ ಬಗ್ಗೆ ಶಾಲೆಗಳಿದ್ದರೆ ಅಂಥಲ್ಲಿ ಪಾಠಶಾಲೆಯಬಂದವರೂ ಸಹ ಶಾಲೆಗೆ ಹೋಗುವುದು. (6) ತಮ್ಮೊಳಗೆ ಇರುವ ಅಸ್ಪೃಶ್ಯತೆಯನ್ನು ಹೋಗಲಾಡಿಸಿಕೊಳ್ಳುವುದು.

ಇವುಗಳ ಕುರಿತು ತಪಶೀಲಾಗಿ ಹೇಳಬೇಕಾಗಿದೆ. ನಮ್ಮ ಹವೆಯಲ್ಲಿ ದಿನಕ್ಕೆ ಒಂದು ಸ್ನಾನ ಅತ್ಯವಶ್ಯ. ಯಾವ ಹವೆಯಲ್ಲೂ ಶುಚಿಯೂದ ಬಟ್ಟೆಯನ್ನು ಧರಿಸಬೇಕು. ಹರಿಜನರ ವಸತಿಗಳಲ್ಲಿ ನೀರು ಸುಲಭವಾಗಿ ದೊರಕುವುದಿಲ್ಲವೆಂತ ಗೊತ್ತಿದೆ. ಅವರು ಸಮುದಾಯದ ಭಾವಿ ಕೆರೆಗಳನ್ನು ಮುಟ್ಟಕೂಡದು. ಬಟ್ಟೆ ಬದಲಾಯಿಸಿಕೊಳ್ಳುವಷ್ಟು ಅನುಕೂಲವಿಲ್ಲ. ಒಂದು ತಂಬಿಗೆ ಹುಂಬ ನೀರಿದ್ದರೆ ಶುಚಿಯೂಗುವ ಸ್ನಾನ ಮಾಡಿಕೊಳ್ಳಬಹುದೆಂತ ಈಗ ಒಪ್ಪುವ ಮಾತಾಗಿದೆ. ಒದ್ದೆ ಬಟ್ಟೆಯಿಂದ ತಲೆ ಮೈಯೆಲ್ಲಾ ಒರಸಿಕೊಂಡು ಒಣಗಿದ ಬಟ್ಟೆಯಿಂದ ಒರಸಿಕೊಂಡರಾಯಿತು. ನಿತ್ಯ ಸ್ನಾನಮಾಡುವುದಾದರೆ ಒದ್ದೆ ಬಟ್ಟೆಯನ್ನೇ ಜೆನ್ನಾಗಿ ಹಿಂಡಿದರೆ ಈ ಹವದಲ್ಲಿ ನೀರು ಆರಿಸಲೂ ಅದನ್ನೇ ಉಪಯೋಗಿಸಬಹುದು. ಬರೇ ಲಂಗೋಟಿ ಉಟ್ಟುಕೊಂಡು ಬಟ್ಟೆಯನ್ನೆಲ್ಲಾ ಒಗೆದು ಒಣಗಿಸಿಕೊಳ್ಳಬಹುದು. ಈ ಮಾತುಗಳಲ್ಲಿ ಹೊಸದೇನೂ ಇಲ್ಲ. ಆದಂ ಅದನ್ನಾದರೂ ನೂರಾರು ಕೆಲಸಗಾರರಿಗೆ ಹೇಳಿಕೊಡಬೇಕಾಗುತ್ತದೆ. ಗ್ರಾಮ್ಯಯೇಟುಗಳಿಗೂ ಸಹ ಈ ಆರೋಗ್ಯದ ಸುಲಭ ಉಪಾಯಗಳು ತಿಳಿದಿರುವುದಿಲ್ಲ

ತೋಟಿ ಕೆಲಸವನ್ನು ಮರ್ಯಾದೆಯಿಂದ ಮಾಡುವುದು ಅಸಾಧ್ಯವಾಗಿರುವಂತೆ ಜಾತಿ ಹಿಂದೂಗಳು ಮಾಡಿಬಿಡುತ್ತಾರೆ ಅಸ್ಪೃಶ್ಯರು ಕೆಲಸ ಮಾಡುವುದೆಂಬ ಕಾರಣದಿಂದ ಕಕ್ಕುಸ್‌ಗಳನ್ನು ಬಹಳ ಅಶುಚಿಯಾಗಿ ಇಡುತ್ತಾರೆ. ಅವು ಕತ್ತಲಾಗಿ, ಗಾಳಿ ಇಲ್ಲದೆ ಬರೇ ಸ್ವಲ್ಪ ಭಾಗ ಮಾತ್ರ ಬಹಳ ಕಷ್ಟದಿಂದ ಶುದ್ಧ ಮಾಡಲು ಅನುಕೂಲವಿರುವುದಾಗಿ ಇರುತ್ತವೆ. ಇಂಥವುಗಳನ್ನು ಶುದ್ಧ ಮಾಡುವುದೆಂದರೆ ನಿಶ್ಯಲೂ ನರಕಕ್ಕೆ ಇಳಿದಂತೆಯೇ ಸರಿ. ಮಲವನ್ನು ನೋಡಬಾರದೆಂಬ ಮೂಢ ನಂಬಿಕೆಯಿಂದ ತೋಟಿಗಳಿಗೆ ಕಕ್ಕುಸನ್ನು ಜೆನ್ನಾಗಿ ಕ್ಲೀನ್ ಮಾಡಲು ಅನುಕೂಲ ಕೊಡದ್ದರಿಂದ ಈ ದೇಶದ ಹವಾಗುಣ ಎಲ್ಲಾದಿದ್ದರೆ ಈಗಕ್ಕಿಂತಲೂ ಎಷ್ಟೋ ಹೆಚ್ಚಿನ ಸಂಖ್ಯೆ ಜನರು ಬೇಗನೇ ಸಾಯುತ್ತಿದ್ದರು. ಈಗಿನ ಅನಾನುಕೂಲದ ವಿದ್ಯಮಾನದಲ್ಲಾದರೂ ಹರಿಜನರು ಅವಶ್ಯವಾಗಿ ಮಾಡಬೇಕಾಗಿರುವ ಸಮಾಜ ಸೇವೆಯನ್ನು ಮಾಡಿದ ಕೂಡಲೇ ಸ್ನಾನ ಮಾಡಬೇಕು. ಶುದ್ಧ ಮಾಡಲು ಬರೇ ಸ್ವಲ್ಪ ಹುಲ್ಲು ಉಪಯೋಗಿಸುವ ಬದಲು ತುಂಬಾ ಒಣಗಿದ ಮಣ್ಣನ್ನು ಉಪಯೋಗಿಸಬಹುದು.

ನಿಪುಣ ತೋಟಿಯೆಂತ ಹೇಳಿಕೊಳ್ಳುವ ನಾನು ಹೆಚ್ಚು ಖರ್ಚಿಲ್ಲದ ಜೆನ್ನಾಗಿ ಶುದ್ಧ ಮಾಡುವ ಬೇರೆ ರೀತಿಗಳನ್ನೂ ತೋಟಿ ಕೆಲಸದಲ್ಲಿ ತೋರಿಸಿಕೊಟ್ಟಿನು. ಈ ಕೆಲಸಕ್ಕೆ ಊರವರು ಹೆಚ್ಚಾಗಿ ಸಹಕರಿಸಬೇಕು. ಈ ಅಭಿರುಚಿ ಇರುವ ವಿಷಯವನ್ನು ಹೀಗೆ ಘೋಷ್ಯಾರಿಯೂಗಿ ಬರೆಯಲು ಸಾಧ್ಯವಿಲ್ಲ. ಇಚ್ಛೆ ಇರುವವರು ಆರೋಗ್ಯಸಾಧನೆಗಳ ವಿಷಯ ನಾನು ಈ ಮೊದಲು ಬರೆದ ಲೇಖನಗಳನ್ನು ನೋಡಬಹುದು. ತೋಟಿಗಳು ಈ ಕೆಲಸ ಮಾಡುವಾಗ ಒಂದು ಪ್ರತ್ಯೇಕ ಉಡುಪನ್ನೇ ಧರಿಸಬೇಕು. ಅವರನ್ನು ಇಟ್ಟುಕೊಳ್ಳುವ ಜನರು ಅವರಿಗೆ ಇಂಥಾ ಉಡುಪನ್ನು ಮಾಡಿಕೊಡಬೇಕು.

ಪರಿಶುದ್ಧವಾಗಿದ್ದುಕೊಂಡು ಚಕ್ಕಳ ಹದಬರಿಸುವ ಕೆಲಸವು ಇನ್ನೂ ಕಷ್ಟದ್ದು. ನಮ್ಮ ಈ ಕೆಲಸಗಾರರಿಗೆ ಈಗಿನ ಕಾಲದ ಚಕ್ಕಳ ಸುಲಿಯುವ ಮತ್ತು ಹದಬರಿಸುವ ರೀತಿಗಳು ತಿಳಿದಿಲ್ಲ. ಮೇಲ್ಜಾತಿಯವರೆನ್ನಿಸಿಕೊಳ್ಳುವವರು ಈ ಒಳ್ಳೇ ಕೆಲಸ ಮಾಡುವ ನಮ್ಮ ಜಾತಿಯವರ ನಿಗಾ ತೆಗೆದುಕೊಂಡಿಲ್ಲ. ಸತ್ತ ದನಗಳನ್ನು ಸಾಗಿಸುವಲ್ಲಿಂದ ಹಿಡಿದು ಚಕ್ಕಳವನ್ನು ಹದ ಬರಿಸುವ ವರೆಗಿನ ಎಲ್ಲಾ ಕೆಲಸಗಳನ್ನೂ ಬಹಳ ಹಳೇ ರೀತಿಯಲ್ಲಿ ಮಾಡಿ ಚಕ್ಕಳ ಕೆಡುವಂತೆ ಸಹ ಮಾಡುತ್ತಾರೆ. ಹೊಸ ರೀತಿಗಳನ್ನು ಕಲಿತುಕೊಳ್ಳಬಹುದು.

ತೋಟಿಗಳಿಗೆ ಮನೆ ಎಂಜಲನ್ನು ಬಹು ಅನೆಷ್ಯ ರೀತಿಯಿಂದ ಬಿಸಾಡುತ್ತಾರೆ. ಈ ಪದ್ಧತಿಯನ್ನು ನಿಲ್ಲಿಸಬೇಕು. ತೋಟಿಗಳಿಗೆ ಈ ಪದ್ಧತಿಯು ಅಭ್ಯಾಸವಾಗಿ ಇದರಲ್ಲಿ ಆಕ್ಷೇಪಣೆಯೇ ತೋರುವುದಿಲ್ಲ. ಈ ರೀತಿ ಎಂಜಲು ತಿನ್ನುವುದು ಆಕ್ಷೇಪಕರಂತೆ ಶಾಲೆಗಳಲ್ಲಿ ಹೇಳುತ್ತಾರೆಂಬ ಕಾರಣದಿಂದ ಮಕ್ಕಳನ್ನು ಶಾಲೆಯಿಂದಲೇ ಬಿಡಿಸಿಬಿಟ್ಟ ಉದಾಹರಣೆ ನನಗೆ ಗೊತ್ತಿದೆ.

ಚಕ್ಕಳ ಹದ ಮಾಡುವವರು ಸತ್ತ ಮೃಗಗಳ ಮಾಂಸವನ್ನು ತಿನ್ನುವುದನ್ನು ಬಿಡಿಸಬೇಕು. ಸಸ್ಯಾಹಾರಿಯೂದ ನಾನು ಹರಿಜನರು ಮಾಂಸಾಹಾರವನ್ನೇ ಬಿಡಬೇಕೆಂತ ಹೇಳುತ್ತೇನೆ. ಒಟ್ಟು ಮನುಷ್ಯ ಜಾತಿಯೇ ತಿರಸ್ಕರಿಸುವ ಸತ್ತ ಮೃಗಗಳಗಳ ಮಾಂಸವನ್ನೂ ಹಿಂದೂಧರ್ಮಕ್ಕೆ ವಿರೋಧವಾದ ಗೋ ಮಾಂಸವನ್ನೂ ಇವರು ಬಿಡಬೇಕು. ಸತ್ತ ದನಗಳನ್ನು ಸಾಗಿಸಿದ್ದಕ್ಕೆ ಇವರಿಗೆ ಅಡರ ಮಾಂಸವೇ ಕೂಲಿಯೂಗಿ ದೊರೆಯುವಂಥಾದ್ದು ಎಂತ ನನಗೆ ಗೊತ್ತಿದೆ. ಸತ್ತ ಮೃಗಗಳ ಮಾಂಸವನ್ನು ತಿನ್ನುವುದು ಬಿಟ್ಟದಕ್ಕೆ ಇವರನ್ನು ಗ್ರಾಮಸ್ಥರು ಹೊಡೆದಿದ್ದಾರೆ ಎಂತ ಡಾಕ್ಟರ್ ಅಂಬೇಡ್ಕರರು ನನಗೆ ಹೇಳಿದ್ದಾರೆ. ಹೀಗೆ ತಿನ್ನುವುದನ್ನು ಬಿಟ್ಟರೆ ಸತ್ತದ್ದನ್ನು ಸಾಗಿಸಿದ್ದಕ್ಕೆ ದುಡ್ಡು ಕೇಳಿಯೂರೆಂತಲೂ, ಸಾಗಿಸದೆ ಹೋದಾತೆಂತ ಲೂ ಇವರ ಭಯವಾಗಿದೆ. ಹೇಗಾದರೂ ಈ ಕೆಟ್ಟ ಅಭ್ಯಾಸವನ್ನು ಬಿಡಬೇಕು. ಈ ಒಂದು ದುರ್ಗುಣವನ್ನು ಬಿಡುವುದರಿಂದ ಜಾತಿ ಹಿಂದೂಗಳಿಗೆ ಇವರ ಮೇಲೆ ಗೌರವ ಹೆಚ್ಚಾಗುತ್ತದೆ. ಮತ್ತು ಸುಧಾರಕರ ಕೆಲಸ ಸುಲಭವಾಗುತ್ತದೆ.

ನಾಲ್ಕು ಏನನೇ ವಿಷಯಗಳು ಸ್ವತಃ ಸಿದ್ಧವಾಗಿದೆ. ಹೆಚ್ಚಿಗೆ ಬರೆಯಬೇಕಾದದ್ದಿಲ್ಲ.

ಕಡೆಯುದು ಅಸ್ಪೃಶ್ಯರೊಳಗೆ ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು ಇದು ಅವಶ್ಯವಾಗಿ ಆಗಬೇಕಾದ ಸುಧಾರಣೆ. ಈ ದ್ವಿಗುಣ ಅಸ್ಪೃಶ್ಯತೆಯನ್ನು ಹೋಗಲಾಡಿಸದಿದ್ದರೆ ಅಸ್ಪೃಶ್ಯತಾ ನಿವಾರಣೆ ಕೆಲಸವು ಕಷ್ಟವಾದೀತು ಹಿಂದೂ ಧರ್ಮದ ಕೊರತೆಯನ್ನು ಹೋಗಲಾಡಿಸುವ ಕೆಲಸವಾದ್ದರಿಂದ ಎಷ್ಟೇ ಅಡ್ಡಿಗಳಿದ್ದರೂ ಇದನ್ನು ಹೋಗಲಾಡಿಸಲೇಬೇಕು. ಕೆಲಸಗಾರರು ಒಳ್ಳೇ ನಡತೆಯವರಾಗಿರಬೇಕು.

ಎಷ್ಟೇ ಉತ್ಸಾಹ ಇರುವವನಿಗಾದರೂ ಈ ಕಾರ್ಯಕ್ರಮವು ಸಾಕಾಗಿದೆ. ಇನ್ನೂ ಒಂದೆರಡು ವಿಷಯ ಬರೆಯಬೇಕಾಗಿದೆ. ಹರಿಜನರು ಯಾವುದೇ ಕಾರಣಕ್ಕಾದರೂ ಉಪವಾಸವ್ರತವನ್ನು ಕೈಕೊಳ್ಳಬಾರದು, ಸತ್ಯಾಗ್ರಹ ಮಾಡಬಾರದು. ಜಾತಿ ಹಿಂದೂಗಳು ಏನೇನು ಮಾಡುತ್ತಾರೆಂತ ನೋಡಲಿ. ಜಾತಿ ಹಿಂದೂಗಳೊಂದಿಗೆ ಜಗಳವಾಡಬಾರದು. ಅವರು ಜಾತಿ ಹಿಂದೂಗಳೊಂದಿಗೆ ಯಾವಾಗಲೂ ಗೌರವದಿಂದಲೂ ವರ್ಯಾದೆಯಿಂದಲೂ ಇರಬೇಕು. ಈಗಲಂತೂ ಹೀಗಿರಲು ಹೆಚ್ಚಿನ ಅವಶ್ಯವಿದೆ. ಸ್ವತಃ ಕಷ್ಟಸಹಿಸುವುದರಿಂದ ಧರ್ಮದ ಜಯವಾಗುತ್ತದೆಯೇ ಹೊರತು ಜಗಳವಾಡುವುದರಿಂದಲ್ಲ. ಹಿಂಸೆಪಡಿಸಿ ಪಡೆಯಬಹುದಾದ ಹಕ್ಕುಗಳು ಕೆಲವು ಇದೆಯಾದರೂ ಜಾತಿ ಹಿಂದೂಗಳ ಮನಸನ್ನು ಬದಲಾಯಿಸಿ ಪಡೆಯುವುದೇ ಮೇಲು. ಅವರಲ್ಲೂ ಈಗ ಹತ್ತೊಂಬು ಸಾವಿರ ಜನರು ಈ ಕೆಲಸದಲ್ಲಿರುವಾಗ ನಿರಾಶೆಯೂಗಲು ಕಾರಣವಿಲ್ಲ. ತಮ್ಮ ಹಕ್ಕುಗಳು ನ್ಯಾಯಕ್ಕೆ ಸಮ್ಮತವಾಗಿದೆಯೆಂತ ಸಂಬಿ, ತಾವು ಕಷ್ಟಪಟ್ಟೇ ತಮ್ಮ ಮೇಲ್ಮೆಯನ್ನು ಮಾಡಿಕೊಳ್ಳುತ್ತೇವೆಂತ ನಂಬಬೇಕು.

ಹುತ್ರಿ ಹಬ್ಬದ ಮುಹೂರ್ತ ಪಟ್ಟಿ.

ಇದೇ ವೃಶ್ಚಿಕ ಮಾಸ ತೇದಿ 26ನೇ ಅಂದರೆ ಡಿಸೆಂಬರ್ ತಾ. 11ನೇ ಆದಿತ್ಯವಾರ ದಿನ ಕೃತಿಕಾ ನಕ್ಷತ್ರದಲ್ಲಿ ಇಗ್ಗುತಪ್ಪ ದೇವರ ಕಲಾಡ್ಡ ಹಬ್ಬವಾಗುತ್ತೆ.

ಇದೇ ವೃಶ್ಚಿಕ ಮಾಸ ತೇದಿ 27ನೇ ಅಂದರೆ ಡಿಸೆಂಬರ್ ತಾ. 12ನೇ ಸೋಮವಾರ ದಿನ ರೋಹಿಣಿ ನಕ್ಷತ್ರದಲ್ಲಿ ದೇವ ಪೊಳ್ದು. ಸದರಿ ದಿನ ಸಾಯಂಕಾಲ 6 ಗಂಟೆಗೆ ನೆರೆಕಟ್ಟುವದು, 7 ಗಂಟೆಗೆ ಕದಿರು ತೆಗೆಯುವದು, 8 ಗಂಟೆಗೆ ಊಟಮಾಡುವ ಶುಭ ಮುಹೂರ್ತ.

ಇದೇ ವೃಶ್ಚಿಕ ಮಾಸ 28ನೇ ತೇದಿ ಅಂದರೆ ಡಿಸೆಂಬರ್ ತಾ. 13ನೇ ಮಂಗಳವಾರ ದಿನ ಸಾಯಂಕಾಲ ಮೃಗೇಶ್ವರ ನಕ್ಷತ್ರದಲ್ಲಿ ನಾಡ-ಪೊಳ್ದು. ಸದರಿ ದಿನ ಸಾಯಂಕಾಲ 7 ಗಂಟೆಗೆ ನೆರೆಕಟ್ಟುವುದು, 8 ಗಂಟೆಗೆ ಕದಿರು ತೆಗೆಯುವದು, 9 ಗಂಟೆಗೆ ಊಟಮಾಡುವ ಶುಭ ಮುಹೂರ್ತ.

ಕೊಡಗು ಮುಜ್ರಾಯಿ ಇಲಾಖೆ, ಮಡಿಕೇರಿ. — ಕೆ. ಚಂಗಪ್ಪ, (ಪ್ರೆಸಿಡೆಂಟ್.)

WANTED.

Candidates for Electrical, Automobile, Wireless, Telegraph and Commercial classes opening shortly. Railfare paid. Rules on 2 anna stamps.

IMPERIAL GUILD INSTITUTE,

6—1 Bombay, 18.

ಸ್ಪೃಶ್ಯತೆ.

ಅಮೇರಿಕಾ ನಿವಾಸಿಗಳಾಗಿರುವ ನಿವೇದಿ (ನಿವಾಸಿಗಳ ಸಂಘ) ಎಂಬ ಕಳೆದ ವರ್ಷ ಹಿಂದೂ ಧರ್ಮವನ್ನು ಅವಲಂಬಿಸಿ [illegible] ಅವಳು ಮಹಾತ್ಮರ ಸಂಗಡ ಬರುವ ಜನವರಿ 2 ರಲ್ಲಿ ಉಪವಾಸ ಮಾಡುವ ಸಂಕಲ್ಪ ಮಾಡಿ ಮಹಾತ್ಮರಿಗೆ ಬರೆದ ಪತ್ರ ಈ ಕೆಳಗೆ ಕೊಡಲಾಗಿದೆ.

ಮಹಾತ್ಮರೇ, ಈಗಿನ ಕಾಲದ ಬೋಧಕರಾದ ವಾಲ್ಟ್ ವ್ಹಿಟ್‌ಮ್ಯಾನ್ ಎಂಬವರು ಹೇಳಿರುವುದೇನೆಂದರೆ—

ಭೂಮಿಯ ಮಹತ್ವವನ್ನೂ, ಶಕ್ತಿಯನ್ನೂ ಹೋಲುವ ಮಹತ್ವವೂ, ಶಕ್ತಿಯೂ ಬೇರೊಂದಿಲ್ಲ.

ಭೂಮಿಯ ತತ್ವವನ್ನು ಅನುಸರಿಸದ ತತ್ವವು ಬೇರೊಂದಿಲ್ಲ.

ಭೂಮಿಯ ವಿಶಾಲದಂತೆ ವಿಶಾಲವಾಗಿರದ ರಾಜಕೀಯ ವಿಷಯ, ಹಾಡು, ಧರ್ಮ, ನಡತೆ ಮುಂತಾದವು ಯಾವ ಲಿಪ್ಪಿಕ್ಕೂ ಬಾರದವಾಗಿವೆ. ಅವು ಭೂಮಿಯಂತೆ ಋಜುವಾಗಿಯೂ, ಶಕ್ತಿಮತ್ತಾಗಿಯೂ ನಿಷ್ಪಕ್ಷಪಾತವಾಗಿಯೂ ಇರಬೇಕು.

ವಾಲ್ಟ್ ವ್ಹಿಟ್‌ಮ್ಯಾನಿನ ಸೃಷ್ಟಿಕ ದೃಷ್ಟಿಯಿಂದ ಮಗಳಾದ ನಾನು, ಅವರ ಈ ಹೋಲಿಕೆಗಳ ವೇರೆ ನಿಮ್ಮಲ್ಲಿ ಮಹತ್ವವಿರುವುದರಿಂದ ನಿಮ್ಮ ಶಿಷ್ಯಳಾಗಿದ್ದೇನೆ. ನಮ್ಮ ಸ್ನೇಹಿತನಾದ ಮೆ. ಎಲ್ಸರೊಂದಿಗೆ, 'ನೀವು ಅವಳು ಬರಲಿ, ಹಿಂದೂಸ್ಥಾನದ ಸೇವೆನೂಡಬೇಕಾದರೆ ಅವಳ ಧರ್ಮವನ್ನು ಬದಲಾಯಿಸಬೇಕಾದದ್ದಿಲ್ಲ"ವೆಂತ ಹೇಳಿದ್ದಿರಿ. ನನ್ನ ಧರ್ಮವನ್ನು ನಾನು ಬದಲಾಯಿಸಲಿಲ್ಲವೆಂತ ಹೇಳುವ ಕಾಲ ಬಂದಿದೆ. ಹಿಂದೂಸ್ಥಾನಕ್ಕೆ ಬರುವ ಅನೇಕ ವರ್ಷಗಳ ಮುಂಚೆಯೇ ಸನಾತನ ಧರ್ಮವೇ ಅತ್ಯುತ್ತಮ ಧರ್ಮವೆಂತ ನಾನು ನಂಬಿದ್ದೆನು. ಅಮೇರಿಕಾದ ಸ್ವಾತಂತ್ರ್ಯ ಯುದ್ಧದಲ್ಲಿ ಹೋರಾಡಿದ ನನ್ನ ಪೂರ್ವಜರು ಸ್ವತಂತ್ರ ಅಭಿಪ್ರಾಯವಿರುವ ಕೂಟಕ್ಕೆ ಸೇರಿದವರಾಗಿದ್ದರು. ಅವರು ಹಿಂದೀಯರೊಂದಿಗೆ ಭೂಮಿಯ ಸಾರವನ್ನು ತಿಳಿದವರಾಗಿದ್ದರು. ದೈವದೃಷ್ಟಿಯನ್ನು ಪೂಜಿಸುವ ಅಮೇರಿಕಾದವರಿಗೆ ಹಿಂದೂಸ್ಥಾನದ ಸಮಸ್ತವೂ ದೇವರ ಮಯವೆಂಬ ಭಾವನೆಯು ಅಲ್ಪ ಸ್ವಲ್ಪವಾಗಿ ಕೇಳಿಸುತ್ತದೆ.

ಕಳೆದ ವರ್ಷ ನಾನು ಕಾಶ್ಮೀರದಲ್ಲಿ ಸನಾತನ ಧರ್ಮವನ್ನು ಕೈಕೊಂಡಾಗ ನಾನು ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಬದಲಾಗಲಿಲ್ಲ. ನಿಜವಿನಿಂದಲೇ ಜೀವಿಸುವೇ ಧರ್ಮದ ಕಟ್ಟುಗಳನ್ನು ನಾನು ಅಂಗೀಕರಿಸುತ್ತಿದ್ದಿಲ್ಲ. ನಾನು ಕೈಸ್ತ ಧರ್ಮವನ್ನು ಬಿಟ್ಟು ಹಿಂದೂ ಆದದ್ದಲ್ಲ. ಕೈಸ್ತ ಧರ್ಮವನ್ನು ಅನುಸರಿಸುವ ಚರ್ಚ್‌ಗಳಲ್ಲಿ ನಿಜವಾದ ಕೈಸ್ತ ಧರ್ಮವಿಲ್ಲ. ಯಾಕೆಂದರೆ, ನೀಗ್ರೋ ಜನರನ್ನು ಇಂಥ ಚರ್ಚ್‌ಗಳಲ್ಲಿ ಅಸ್ಪೃಶ್ಯರಾಗಿ ಭಾವಿಸುತ್ತಾರೆ.

ಹಿಂದೂಸನೂಜದಲ್ಲಿ ಅಲ್ಪ ಸಂಖ್ಯಾಕರಾಗಿರುವ ಹಳೇ ಪದ್ಧತಿಯನ್ನನುಸರಿಸುವವರೇ ತುಂಬಿದ್ದಿದ್ದರೆ ನಾನು ಹಿಂದೂ ಧರ್ಮವನ್ನು ಮನಃಪೂರ್ತಿಯಾಗಿ ಅನುಸರಿಸುತ್ತಿರಲಿಲ್ಲ. ಮಹಾಭಾರತ, ಉಪನಿಷತ್ತುಗಳು, ವೇದ ಮತ್ತು ಸೂತ್ರಗಳಲ್ಲಿ ಇರುವ ಸರ್ವವೂ ದೇವರಿಂದ ತುಂಬಿದೆಯೆಂಬ ನಂಬಿಕೆಯು, ನನ್ನನ್ನು ಹಿಂದೂಧರ್ಮಕ್ಕೆ ಸೇರಿಸುವ ಕ್ರಿಯೆಯನ್ನು ನಡಿಸಿದ ಕಾಶ್ಮೀರದ ಪೂರ್ವಪದ್ಧತಿಯನ್ನನುಸರಿಸುವ ಹಿಂದೂಗಳಲ್ಲಿ ನನಗೆ ಕಂಡು ಬಂತು. ನನ್ನನ್ನು ಅವರ ಮಗಳಾಗಿ ಅಂಗೀಕರಿಸಿದರು. ಅವರನ್ನು ನನ್ನ ಗುರುಗಳಾಗಿ ನಾನು ಪೂಜಿಸುತ್ತೇನೆ.

ನಾನು ಹೋದ ಎಲ್ಲಾ ದೇವಸ್ಥಾನಗಳಲ್ಲೂ, ಯಾತ್ರಾ ಸ್ಥಳಗಳಲ್ಲೂ ಗುಂಪಿಗೆ ಸೇರಿಕೊಂಡು ನಾನೂ ಪೂಜೆಗಳನ್ನು ನಡಿಸಿರುತ್ತೇನೆ. ಅಂಥಲ್ಲೆಲ್ಲಾ ಪ್ರಪಂಚದ ಎಲ್ಲದರಲ್ಲೂ ಏಕತ್ವವಿದೆಯೆಂಬ ಭಾವವೂ, ಭ್ರಾತೃಭಾವವೂ, ಸ್ತ್ರೀ ಸಮೂಹಕ್ಕೆ ಗೌರವವೂ, ಆತ್ಮಕ್ಕೆ ಸಾವಿಲ್ಲವೆಂಬದರಲ್ಲಿ ನಂಬಿಕೆಯೂ, ಅಖೈರು ತಿಳಿಗೆ ಗುರಿಯಾಗುವಿಕೆಯೂ ಮತ್ತು ತಾನು ಮಾಡಿದ ಕರ್ಮದ ಫಲವನ್ನು ತಾನೇ ಅನುಭವಿಸಬೇಕೆಂಬ ತಿಳುವಳಿಕೆಯೂ ಕಂಡುಬರುತಿತ್ತು. ಹಿಂದಿನ ರೀತಿಗಳನ್ನು ಏನೇನೂ ಬಿಡದೆ ಇರುವ ಮುತ್ರಾ (ಮಥುರಾ) ದಲ್ಲಿ ವಿಹಾರ ಪ್ರಸಾದ (ನೈವೇದ್ಯ)ವನ್ನು ಮಾಡುವಲ್ಲಿಗೆ ಸಹ ನನ್ನನ್ನು ಕರಕೊಂಡು ಹೋಗಿದ್ದರು. ಪುರೋಹಿತರಾಗಲೀ, ಇತರ ಜನರಾಗಲೀ ಅವರ ಹಬ್ಬಗಳಲ್ಲಾಗಲೀ, ಊಟದಲ್ಲಾಗಲೀ, ಪೂಜೆಗಳಲ್ಲಾಗಲೀ ನಾನು ಸೇರಕೂಡದೆಂತ ಎಲ್ಲಿಯೂ ಹೇಳಲಿಲ್ಲ. ಹೀಗೆ ನಾನು ಸೇರಿದ್ದರಿಂದ ಅನೇಕ ತರದವರು ಅನೇಕ ಜಾತಿಗೆ ಸೇರಿರುವವರು. ಹಿಂದೂ ಧರ್ಮವು ಸರ್ವರನ್ನೂ ವ್ಯಾಪಿಸುವಂಥಾದ್ದಾಗಿದೆ ಎಂತ ನನಗೆ ಬೋಧಿಸುತ್ತಿದ್ದರು. ಯಾತ್ರೀಕರೊಂದಿಗೆ ಯಾತ್ರಾ ಸ್ಥಳಗಳಿಗೆ ನಡೆದು ಹೋಗುವಾಗಲೂ, ಪೂಜೆಗಳಲ್ಲಿ ಕೂಡಿಯೂ, ಧರ್ಮ ಶಾಲೆಗಳಲ್ಲಿ ಒಟ್ಟಿಗೆ ಊಟ ಮಾಡುತ್ತಲೂ ಅನೇಕ ತಿಂಗಳುಗಳ ವರೆಗೆ ಅವರ ಜೊತೆಯಲ್ಲೇ ಇದ್ದೆ. ಪುರೋಹಿತರ ಒಂದು ಗುಂಪು ಇತ್ತೀಚೆಗೆ ಹಿಂದೂ ಧರ್ಮಕ್ಕೆ ತಂದೊಡ್ಡಿರುವ ಬೇರ್ಪಟ್ಟಿರುವಿಕೆಯಿಂದ ಮಹತ್ವವಾದ ಹಿಂದೂ ಸಮಾಜದ ಹೃದಯವು ಕೆಡಲಿಲ್ಲವೆಂತ ನನ್ನ ಅನುಭವದಿಂದ ನನಗೆ ತಿಳಿದಿದೆ.

ದೇವಸ್ಥಾನಗಳಲ್ಲಿ ಮಾಡುವ ಪೂಜಾ ವಿಧಿಗಳಲ್ಲಿ ಅನೇಕ ಮಹತ್ವವಾದ ಸತ್ಯಗಳು ತೋರಿ ಬರುತ್ತವೆ. ಉದಾಹರಣೆಯೊಗಿ ಒಂದನ್ನು ಹೇಳಬಹುದು. ತನ್ನನ್ನು ತಾನೇ ಹೂವು ನೀರಿನಿಂದ ಪೂಜಿಸುವುದಿದೆ. ಇದರಿಂದ ಸರ್ವರಲ್ಲೂ ಆತ್ಮನು ಇದ್ದಾನೆ, ಸೂರ್ಯನ ಕಿರಣದಂತೆ ಹರಡಿರುವ ಪರಮಾತ್ಮನು ಸರ್ವರಲ್ಲೂ ಇದ್ದಾನೆ ಎಂಬ ಭಾವನೆಯನ್ನು ಈ ಪೂಜೆಯು ಸೂಚಿಸುತ್ತದೆ. ಇಂಥಾ ಪೂಜಾ ವಿಧಿಗಳು ಇನ್ನೂ ಅನೇಕ ಇವೆ. ಅವುಗಳನ್ನು ತಿರಸ್ಕರಿಸಕೂಡದು. ಅಂಥಾ ಕ್ರಿಯೆಗಳಿಂದ ನಮ್ಮ ಒಳಗೆ ಆತ್ಮನಿದ್ದಾನೆಂತ ಜ್ಞಾಪಿಸಿಕೊಂಡು ಅಂಥಾ ಪರಮಾತ್ಮನು ಸರ್ವ ವ್ಯಾಪಿಯೊಗಿದ್ದಾನೆಂಬ ಭಾವನೆ ಇಟ್ಟು ಕೆಲಸ ಮಾಡಲು ಸಹಾಯವಾಗುತ್ತದೆ.

ಹಿಂದೂ ಧರ್ಮಕ್ಕೆ ಪುರೋಹಿತರು ಸೇರಿಸಿರುವ ಕೆಲವು ಕ್ರಿಯೆಗಳಿಂದ ಬೇರ್ಪಟ್ಟು, ಇರುವಿಕೆಯ ಭಾವಕ್ಕೆ ಸಹಾಯವಾಗುತ್ತವೆ. ಅಂಥಾ ಕ್ರಿಯೆಗಳನ್ನು ತಿರಸ್ಕರಿಸಬೇಕು.

ಶಂಕರಾಚಾರ್ಯರು ಬ್ರಹ್ಮನಿಂದ ಬೇರಾದ ಒಂದು ವಸ್ತುವಾದರೂ ಇಲ್ಲವೆಂತಲೂ, ಒಳ್ಳೇದು ಕೆಟ್ಟದ್ದು, ಹೊಗಳಿಕೆ ದೂರು ಎಂಬ ಇತ್ಯಾದಿ ದ್ವಂದ್ವಿಗಳನ್ನು ವಿರೋಧಿಸುವುದೇ ಮೋಕ್ಷಕ್ಕೆ ದಾರಿಯೆಂತಲೂ, ಎಲ್ಲವನ್ನೂ ಬ್ರಹ್ಮನೆಂದು ಭಾವಿಸುವುದೇ ಮೆಟ್ಟಿಲೆಂತಲೂ ಹೇಳಿದ್ದಾರೆ. ಆದರೆ ಅದೇ ಶಂಕರಾಚಾರ್ಯರ ಪ್ರತಿನಿಧಿಯು, ನೀವು ತೋಟಿಯ ಕೆಲಸವು ಹೇಯವಲ್ಲವೆಂತ ಹೇಳುವಾಗ ನಿಮ್ಮನ್ನು ವಿರೋಧಿಸುತ್ತಾರೆ! ಅಶುಚಿಯಿಂದ ತುಂಬಿರುವ ಮನಸುಳ್ಳವರು ಇಂಥಾ ಬೇಧಗಳನ್ನೂ, ನಿಯಮಗಳನ್ನೂ ಮಾಡಿದ್ದಾರೆಯೋ ಹೊರತ, ಶುದ್ಧವಾದ ಮನಸಿರುವವನಿಗೆ ಎಲ್ಲವೂ ಶುದ್ಧವಾಗಿಯೇ ಕಾಣುತ್ತದೆ. ದೇವತಾ ಮನುಷ್ಯನಿಗೆ ಸರ್ವವೂ ದೇವರಾಗಿಯೇ ಕಾಣುತ್ತದೆ. ಶುದ್ಧವಾದ ಮನಸ್ಸುಳ್ಳವನಿಗೆ ಪ್ರಕೃತಿಯಾಗಲೀ ಭೂಮಿಯಲ್ಲಾಗಲೀ ಅಶುದ್ಧವೇನೂ ಕಾಣಲಾರದು. ಈ ಅದ್ವೈತವನ್ನೇ ಶಂಕರಾಚಾರ್ಯರು ಉಪನಿಷತ್ತುಗಳ ಮತ್ತು ವೇದಗಳ ಸಾರವೆಂತ ಸ್ಥಾಪಿಸಿರುವುದು. ಈಗಿನ ಕಾಲದ ತಂತ್ರಗಳಲ್ಲೂ ಈ ಪುರಾತನ ಸತ್ಯವನ್ನು ನೆಲೆಗೊಳಿಸುವುವು ಇವೇ.

ತಾವು ಹಿಡಿದ ಹಟವೇ ಮೇಲೆನ್ನುವ ಪುರೋಹಿತರುಗಳು ನಿಜವಾದ ಧರ್ಮಕ್ಕೂ, ಜಾತಿ ಭೇದಕ್ಕೂ ಗಲಿಬಿಲಿ ಮಾಡಿಕೊಂಡಿದ್ದಾರೆ. ಗತ್ಯಂತರಗಳಲ್ಲಿ ಜಾತಿಭೇದಗಳೆಂದರೆ ಪ್ಲೇಟೋ ಹೇಳಿರುವ ವೇರೆ ತಮ್ಮ ತಮ್ಮ ಕಸುಬುಗಳನ್ನು ಏಗಿಸಿಕೊಂಡು ಸರ್ವರೂ ಒಂದೇ ರೀತಿ ಊಟ ಮಾಡಲು ಅನುಕೂಲವಿರುವ ವ್ಯವಸ್ಥೆಗಳಾಗಿವೆ. ಆದರೆ ಈ ವ್ಯವಸ್ಥೆಯು ಧರ್ಮವನ್ನು ಆವರಿಸತೊಡಗಿದಾಗ ಮಹಾ ಭಾರತದ ಮಹಾ ಯುದ್ಧವು ನಡೆಯಿತು. ಕೃಷ್ಣನ ಜೊತೆಗಾವನಾದ ಅರ್ಜುನನು ತನ್ನೆ ಜಯವನ್ನು ಸೂತಾಳಲೆಂಕ (ಅಮೇರಿಕಾ)ವ ವರೆಗೆ ತಲಪಿಸಿದನು. ಮಹಾ ಭಾರತದ ಜಯವೆಂದರೆ ಗೀತೆಯ ಜಯ. ಪಾಂಡ್ಯವಂಶದವರು ಯೂರೋಪ್, ಅಮೇರಿಕಾಖಂಡವನ್ನು ಗೆದ್ದರಿಂದರೆ ಪತ್ನಿವ್ರತಕ್ಕೆ ಹೋದ ಸಹೋದರರಿಗೂ ಹಿಂದೀಯರಿಗೂ ಇರುವ ಆತ್ಮಿಕ ಸಂಬಂಧವನ್ನು ಜ್ಞಾಪಿಸಿಕೊಟ್ಟಂತಾಯಿತು. ಹಿಂದೂಸ್ಥಾನವು ಸನಾತನ ಧರ್ಮದ ಮೂಲಸ್ಥಾನವಾಗಿದ್ದ ವರೆಗೆ ಎಲ್ಲಾ ಜಾತಿಯ ಪುರೋಹಿತರೂ ಒಂದೇ ಅಭಿಪ್ರಾಯದವರಾಗಿದ್ದರು.

ಈಗ ಮಹಾಭಾರತ ಯುದ್ಧವು ಪುನಃ ಶಾದಲ್ಪಡುತ್ತಿದೆ. 5000 ವರ್ಷಗಳ ಕೆಳಗೆ ನಡೆದ ಯುದ್ಧದಲ್ಲಿ ರಾಜ್ಯ ಸುಪಾರದೆಯು ಉದ್ದೇಶವಾಗಿರಲಿಲ್ಲ. ಅದು ಸರ್ವವ್ಯಾಪಿಯಾದ ಸತ್ಯವನ್ನು ಸೂಚಿಸುವ ಕೃಷ್ಣನಿಗೂ, ಪುಗಡಭೇದಕ್ಕೂ ನಡೆದ ಯುದ್ಧವಾಗಿದೆ. ಈಗಲೂ ಹಿಂದೂಸ್ಥಾನದ ಹೋರಾಟವು ರಾಜಕೀಯವಲ್ಲ. ಸರ್ವ ವ್ಯಾಪಿಯೂದ ಭಗವದ್ಗೀತೆಯು ದೇವಸ್ಥಾನಗಳನ್ನೂ, ಪುರೋಹಿತರನ್ನೂ ಶುದ್ಧಿಪಡಿಸಿದಾಗ, ರಾಜಕೀಯ ಕ್ಷೇತ್ರಗಳಲ್ಲಿ ತೋರಿಬಂದ ಕುರುಗಳು ಹಸ್ತಿನಾಪುರವನ್ನು ಎರಡನೇ ನೋಡಲಾರರು. ಹಿಂದೂಸ್ಥಾನವು ಪ್ರಸಾದದ ಆತ್ಮಿಕ ಏಕತೆಯನ್ನು ಪುನಃ ಬೋಧಿಸಿದರೆ ಜಪಾನಿಗಳು ವ್ಯಾಪಾರದ ಅನುಕೂಲತೆಗಾಗಿ ಹೋರಾಡುವುದನ್ನು ಬಿಟ್ಟು ದೇವರ ಹೆಸರಿನಲ್ಲಿ ಒಂದಾದಾರು.

ನಾನು ಪೂರ್ವದ ವಾತಾವರಣಕ್ಕೆ ಸೇರಿದವಳು. ನನ್ನನ್ನು ಹಿಂದೂ ಸಮಾಜಕ್ಕೆ ಸೇರಿಸಿಕೊಂಡಿದ್ದು ಒಟ್ಟು ಪ್ರಪಂಚವನ್ನೇ ಹಿಂದೂ ಧರ್ಮಕ್ಕೆ ತಿರುಗಿಸುವ ಕಾಲದ ಪ್ರಾರಂಭವಾಗಲಿ. ಒಟ್ಟು ಪ್ರಪಂಚವು ಹಿಂದೂ ಧರ್ಮಕ್ಕೆ ತಿರುಗುವ ಕಾಲ ಒಂದಲ್ಲ ಒಂದು ದಿನ ಬಂದೇ ಬರುತ್ತದೆ. ಸನಾತನ ಧರ್ಮವು ಬೇರೆ ಜಾತಿಯವರನ್ನು ತನ್ನ ಜಾತಿಗೆ ತಿರುಗಿಸಿಕೊಳ್ಳುವ ಪದ್ಧತಿಯನ್ನು ಇಟ್ಟುಕೊಂಡಿಲ್ಲ. ಆದರೆ ತಾನಾಗಿಯೇ ತನ್ನ ಪೂರ್ವದ ಧರ್ಮಕ್ಕೆ ಹಿಂತಿರುಗಿ ಬರುತ್ತೇನೆನ್ನುವಾಗ ಸೇರಿಸಿಕೊಳ್ಳುವುದು ಸನಾತನ ಧರ್ಮಕ್ಕೆ ಸರಿಯಾಗಿಯೇ ಇದೆ. ಶಾಸ್ತ್ರವನ್ನು ಪೂರ್ತಿದವರು ಸಾವಿಲ್ಲದಿರುವಿಕೆಯನ್ನು ತಿಳಿದು ನೂರಿದ್ದಾರೆ. ಅನಾತಕಾಲದಲ್ಲಿ 5000 ವರ್ಷ ಯಾವ ಲೆಕ್ಕಕ್ಕೂ ಬರುವುದಿಲ್ಲ. ಆದರೆ ಶಾಸ್ತ್ರಗಳನ್ನು ಅರ್ಥಮಾಡುವವರು ತನ್ನ ಮೂಗಿನಿರಿದ ಅಡಿಗೆ ನೋಡುವವರಾಗಿಲ್ಲ.

ಆದ್ದರಿಂದ ನಾನು ನಿಮ್ಮ ಸಂಗಡ ಜನವರಿ 2 ರಲ್ಲಿ ಉಪವಾಸ ಅನಂತರ ಎಂದಾದರೂ ದೇವಸ್ಥಾನಗಳ ಶುದ್ಧಿಗಾಗಿ ಜನರ ಮನಸನ್ನು ಮುಟ್ಟಲು ನೀವು ಉಪವಾಸ ಮಾಡಬೇಕಾಗಿ ಒಂದರೆ, ಆಗ ಉಪವಾಸವನ್ನು ಕೈಕೊಳ್ಳುತ್ತೇನೆ. ನಿಮ್ಮ ನಿಸ್ವಾರ್ಥತೆಯಿಂದ ಪ್ರಪಂಚದ ಎಲ್ಲಾ ಕಡೆಗಳ ವೇಲಲ್ಲಾ ಜಾತಿಯ ಮನಸು ಬದಲಾಗಲಿ. ನಿಮ್ಮ ಅಹಿಂಸೆಯನ್ನು ಸಾಧಿಸುವವರು ಅನುಸರಿಸುವಂತೆಯೇ, ನಿಮ್ಮ ಸಹನೆಯನ್ನು ನಿಮ್ಮ ದ್ಯೋಗಿಗಳು ಅನುಸರಿಸುವಂತೆಯೇ ಅಮೇರಿಕಾದ ಬಿಳೀ ಜನರ ಮನಸು ಕಪ್ಪು ಜನರ ಕಡೆಗೆ ತಿರುಗಲಿ. ಆಗ ಪ್ರಪಂಚದ ಬೇರೆ ಬೇರೆ ಜನರೆಲ್ಲಾ ಒಂದಾಗಿ ಸುಖವಾಗಿರಲಿ.

ಅನ್ಯೋನ್ಯನು ಯಾರು?

ಅನ್ಯೋನ್ಯನೇ ಪರದೈವತಾ ನನು.

(ಲೇಖಕ—ಬಿ. ಗಣಪಯ್ಯ.)

ಅನ್ಯೋನ್ಯನಾರೆ? ಅನ್ಯೋನ್ಯನು ಅನ್ಯೋನ್ಯನೇ. ಅವನೇನು ಮನುಷ್ಯನೋ, ಪ್ರಾಣಿಯೋ, ದೇವತೆಯೋ, ಗಂಧರ್ವನೋ ಪದಾರ್ಥವೋ? ಅಲ್ಲ. ಅಲ್ಲವೋ? ಹೌದು. ಎಲ್ಲವೂ ಹೌದು. ಸರಿ. ಈಗ ಜೆನ್ನಾಯಿತು. ಅನ್ಯೋನ್ಯನೆಂದರೆ ಎಲ್ಲವೂ ಅಲ್ಲ, ಎಲ್ಲವೂ ಹೌದು, ಈ ಕಗ್ಗಗಳಂತಿರಲಿ. ಅಲ್ಲೆಸಿರಿ ಮತ್ತೆ ಹೇಳಿ. ಅವನಿಗೆ ಬೇರೆ ಹೆಸರುಗಳಿವೆಯೇ? ಇವೆ ಬೇಕಷ್ಟಿವೆ; ಕೇಳಿ. ಅವನ ಹೆಸರು ಅನ್ಯೋನ್ಯ. ಇಕ್ಯ ಮತ್ಯವೆಂದು ಅವನಪ್ಪ ಇಟ್ಟದ್ದು. ಅವನನ್ನು ಇಟ್ಟದ್ದು, ಪರಸ್ಪರ ಸಹಾಯ. ಅತನ ಪತ್ನಿ ನಾಮಕರಣ ಮಾಡಿದ್ದು, ಸಹಕಾರ. ಅವನ ಧರ್ಮಪಿತನು ಕರೆದದ್ದು ಬೇರೆ—ಸಹಕಾರ. ಹೀಗೆ ಇನ್ನೂ ಎಷ್ಟೋ ಅಡ್ಡ ಹೆಸರುಗಳಿವೆ. ಆದರೆ ಅನ್ಯೋನ್ಯನ ಅಪ್ಪನ ಹೆಸರೇನು. ವಿವೇಕ. ಸಾರಾ ಸಾರವಿಚಾರೆ, ಅವನನ್ನುವನ ಹೆಸರು. ಇನ್ನು ಪತ್ನಿಯ ಹೆಸರೆಂದರೆ, ಶಕ್ತಿದೇವಿ. ಅನ್ಯೋನ್ಯನ ಮಕ್ಕಳ ಹೆಸರೂ ಕೇಳುವಿರೇ? ಕೇಳಿ, ಗಂಡು ಮಕ್ಕಳು—ಉತ್ಸಾಹ, ಧೈರ್ಯ, ಉದ್ಯೋಗ, ಮಿತಬುದ್ಧಿ, ದೃಢಸಂಕಲ್ಪ, ಇಷ್ಟಾರ್ಥಸಿದ್ಧಿ. ಹೆಣ್ಣು ಮಕ್ಕಳು—ಶ್ರೀ ಮಹಾಲಕ್ಷ್ಮಿ, ಚೈತನ್ಯಸ್ಫೂರ್ತಿ, ಕಳಾನಾಥೆ, ಯಶೋಲಾಭ, ಅಘಟನಾಘಟನ ಮತ್ತು ಚಾತುರ್ಯವತಿ. ಇವರಿಷ್ಟು ಇವನ ಮಕ್ಕಳು. ಇನ್ನಿವನಿಗೆ ವೈರಿಗಳಿರುವರೇ? ಇವನವರು ವೈರಿಗಳೇ ದಾಯಾದಿಗಳು. ಯಾರು ದಾಯಾದಿಗಳು? ಅವರ ಹೆಸರೇನು? ವಾಸಸ್ಥಳವೆಲ್ಲಿ? ಅನ್ಯೋನ್ಯನ ವಾಸಸ್ಥಳ ಆನಂದಸಾಗರ. ಅವನ ದಾಯಾದಿಯದು ದುಃಖಸಾಗರ. ದಾಯಾದಿ ಎಂದರೆ ಆನ್ಯೋನ್ಯನ ಚಿಕ್ಕಪ್ಪ. ಅವನ ಹೆಸರು ಅವಿವೇಕ; ಚಿಕ್ಕಮ್ಮ ಅದರೆ ಅವಿವೇಕನ ಪತ್ನಿ ಅಸಾರತಾನುರಾಗಿ. ಸ್ವಸಂಚಕ್ಕೆ ಇವರಿಬ್ಬರೂ ಸಾಕಾಗದೆ ಹೋಯಿತೆಂದು ತೋರುತ್ತೆ. ಅವಕ್ಕಾಗಿ ಜಗತ್ಕರ್ತನಾದ ಭಗವಂತನು ಇವನಿಗೆ ತುಂಬಾ ಪುತ್ರ ಸಂತತಿಯನ್ನೂ ಕೊಟ್ಟಿರುವನು. ಅವರ ಹೆಸರು ಕೇಳಬೇಕೇ? ಅಬ್ಬಾ, ಯೋಚಿಸುವಾಗಲೇ ನೆತ್ತಿಯೆಲ್ಲಾ ರೋಮಾಂಚನವಾಗುವುದು. ಕೇಳಿ, ಗಂಡು ಮಕ್ಕಳ ನಾಮಧೇಯಗಳನ್ನು. ಕಲಹಪ್ರಿಯ, ಮೂರ್ಖಸ್ಯರ್ಯ, ವೈಷಮ್ಯ, ವಂಚಕವರ, ನಿರ್ದಯ, ದುರ್ಮಾರ್ಗಿ, ನಿರುದ್ಯೋಗಿ, ಭಿನ್ನತುಶ್ರ ಈ ಎಲ್ಲ ಗಂಡು ಮಕ್ಕಳೂ ಸಾಲದೆ ಹೆಣ್ಣು ಬೇರೆ ನಾಲ್ವರು—ದಾರಿದ್ರ್ಯ ಲಕ್ಷ್ಮಿ, ದುರ್ಬಲೆ, ಹಾಹಾಕಾರಿ, ದೈನ್ಯನಾಯತಿ, ಇವರೆಲ್ಲರ ವೊಕ್ಕಾಂ(ಹೆಡ್ ಕ್ವಾರ್ಟರ್ಸ್) ಎಂದರೆ ದುಃಖಸಾಗರ, ಅವಂತರಿಗೆ. ಅನ್ಯೋನ್ಯನ ವಾಸಸ್ಥಳವೆಂತೂ ಆನಂದಸಾಗರದಲ್ಲಿ. ಅವನಾಗಲೀ ಅವನ ಭಕ್ತರ ಹೃದಯದಲ್ಲಿ ಸತತ ನಿವಾಸ. ಮಕ್ಕಳ ಮನೆಯಲ್ಲಿ ಸರ್ವದಾವಾಸ, ಹಾಜರಿಯು ಹೃದಯದಲ್ಲಿ ನಿತ್ಯವಿರಾಸ, ವಿರೋಧಿ ವರ್ಗದಲ್ಲಿ ಉಪವಾಸ, ನೆನೆಯುವವರ ಮನದಲ್ಲಿ ವನವಾಸ. ಇವನನ್ನು ಛಳಿಸತಕ್ಕವರು ದರೆ ಇವನ ದಾಯಾದಿ ವರ್ಗದವರೇ. ಅನ್ಯೋನ್ಯನ ಅಭಿವೃದ್ಧಿಯಲ್ಲಿ ಈ ದಾಯಾದಿಗಳು ವಿರೋಧಿಗಳು. ಅನ್ಯೋನ್ಯನು ಏನೇನು ಮಾಡುತ್ತಿರುವನು? ಏನು ಬೇಕಾದರೂ ಮಾಡುತ್ತಾನು. ಅವನಿಂದಾಗದ ಕೆಲಸಗಳೇ ಇಲ್ಲ. ಕೇಳಿದವರಿಗೆ ಕೇಳಿದ್ದನ್ನು, ಕೇಳಿದ ಕಡೆ, ಕೇಳಿದಂತೆಯೇ, ಕೇಳಿದಷ್ಟನ್ನು, ಪುನಃ ಕೇಳಿಸಿಕೊಳ್ಳದೆ, ಕೇಳಿದ ನಿಮಿಷ ಕೊಡುವ ಸಾಮರ್ಥ್ಯವು ಅವನಿಗಿರುವುದು. ವಹ್ವಾ! ಏನದು, ಏನು ಸಾಹಸ, ಏನು ಶಕ್ತಿ. ಅವನೂ ಅಂಥ ಧೀರನೇ? ಸಂಶಯವೇನು. ಅನ್ಯೋನ್ಯನು ಧೀರನು, ವೀರನು, ಶೂರನು, ಶೂರನು; ಸಾರನು, ಉದಾರನು, ಉಪಕಾರನು. ಹಾಗಾದರೆ ಏನೇನನ್ನು ಮಾಡಿದನು? ಏನೇನನ್ನೂ ಮಾಡಿರುವನು, ಮಾಡುತ್ತಿದ್ದಾನೆ, ಇನ್ನೂ ಮಾಡುವವನಾಗಿದ್ದಾನೆ ಅವದ್ದು, ಆಗುತ್ತಿರುವುದು, ಆಗುವುದು ಎಲ್ಲವೂ ಅವನ ಕಾರ್ಯವಲ್ಲದೆ ಮತ್ತೇನು? ಸತ್ಯ, ಸತ್ಯ, ಭಳಿಪುರೇ, ಅನ್ಯೋನ್ಯ ನಿನ್ನ ಪ್ರಭಾವವು ನಮ್ಮ ಮೂರೈ ಭೂವಿಯೂದ ಭರತ ಖಂಡದ ಕೋಮುಗಳ ಮೇಲೆ ಅದೆಂಥ ಗೆ ಬೀರುವೆ? ಒಗ್ಗಟ್ಟಿಲ್ಲದೆ ಮುಗ್ಗರಿಸುವ ನಮ್ಮ ಮತಮತಾಂತರಗಳೊಳಗೆ ನೀನೆಂಥಾ ಗೆ ನುಗ್ಗುವೆ? ನೋಡಿ, ಇವನು ಸ್ಪೃಶ್ಯ, ಇವನು ಅಸ್ಪೃಶ್ಯ ಈತ ಮಹಮ್ಮದೀಯ, ಇನ್ನೊಬ್ಬ ಕ್ರೈಸ್ತ, ಮತ್ತೊಬ್ಬ ಬೌದ್ಧ, ಮಗದೊಬ್ಬ ಶೀಖ. ಈ ಭಿನ್ನಗಳಿಗೆ ನಿನ್ನ ಆ ದಾಯಾದಿ ಚಿಕ್ಕಪ್ಪನೇ ಕಾರಣನಲ್ಲವೆ? ಪರರಾಜ್ಯಗಳಲ್ಲಿ ನೀನೆಂತು ಧನ್ಯನಾಗಿರುವೆಯೋ ಆತಿಯೇ ನಮ್ಮ ಜನ್ಮಭೂಮಿಯಲ್ಲಿ ನಿನ್ನ ಚಿಕ್ಕಪ್ಪನು ಮನೆಮಾಡಿಕೊಂಡಿರುವನು. ಆದರೆ ಈಗಾಗಲೆ ಆ ದಾಯಾದಿಯು ಇಲ್ಲಿಂದಲೂ ಗಂಟು ಮೂಟೆ ಕಟ್ಟುವ ಗಡಿಬಿಡಿಯಲ್ಲಿದ್ದಾನೆ. ಜೋದ್ಯವೇ ಜೋದ್ಯ. ಮಹಾರಾಯನೂ ನಡೆ ನಡೆ ಬೇಗನೆ,

ಳಿಸಿ, ಮೂಢ್ಯ ಸೇವಾದುರಂಧರರನ್ನಾಗಿ ಮಾಡು. ನಿನ್ನ ಅ ಭಾವದಿಂದಲೇ ಈ ಹೀನಾವಸ್ಥೆ. ದಯವಿಡು ದೇವಾ. ವಾಚಕ ರೇ ಏನಿದು, ಏಷ್ಟೆಂದು ಕಾಡು ಕಗ್ಗದಂತೊದರುವದೆಂದು ಕೋಪಿಸಬೇಡಿರಿ. ಯಾವದನ್ನು ಅನ್ಯೋನ್ಯನು ಅಭಾವದಿಂ ದ ಕಾಣುವನೋ ಅದಕ್ಕೆ ದಾಯೂದಿಯರ ಪ್ರಭಾವ. ದಾ ಯೂದಿಯರಿಂದಾಗುವ ಕಾರ್ಯಕ್ಕೆ ಅನ್ಯೋನ್ಯನ ಅಭಾವ. ಇ ದೇ ಇಹರ ನಿಜಸ್ವಭಾವ. ಇಂತಹ ಮಹಾಮಹಿಮೆಯುಳ್ಳ ಅನ್ಯೋನ್ಯನು ಅದಾವ ದೇವರನ್ನು ಪೂಜಿಸುವನು ? ಅವನೇ ದೇವಾದಿ ದೇವನು, ಅಮಿತ ಪ್ರಭಾವನು, ಸುಗುಣ ಸ್ವಭಾವ ನು, ದುರ್ಗುಣಾಭಾವನು ಅಂದ ಮೇಲೆ ಅವನೆ ದೇವರಲ್ಲ ವೇ. ವಿಷ್ಣು, ಬ್ರಹ್ಮ, ಶಿವ, ಪೈಗಂಬರ, ಕ್ರೈಸ್ತ, ವೈಷ್ಣವ, ಲ ಕ್ಷ್ಮಿ, ಸರಸ್ವತಿ, ಪಾರ್ವತಿ, ಎಲ್ಲರೂ ಅವನಿಂದಲೇ ಹುಟ್ಟಿ ದ್ದು. ಪರಸ್ಪರ ಸಹಾಯ, ಇದರ ತುರುವಿನೊಂದ ಕ್ಷರದಿಂದ ಪರಮೇಶ್ವರನೂ, ಅದೇ ಪ ಎಂಬಕ್ಷರದಿಂದ ಪಾ ರ್ವತಿ, ಪದ್ಮಸಂಭವೆ, ಪುಸ್ತಕನ್ಯಾಸ್ತಹಸ್ತಗಳುಳ್ಳ ಸರಸ್ವತಿ. ಹೀಗೆ ತ್ರಿಮೂರ್ತಿಗಳೂ, ಇವರ ಪತ್ನಿಯರೂ ಉದ್ಭವಿಸಿದರು. ಸೃಷ್ಟಿ, ಸ್ಥಿತಿ, ಲಯ, ಇವೆಲ್ಲಾ ಕಾರಣನೂ ಇವನೇ. ಇಂ ತಿರುವ ಇವನ ಪ್ರಭಾವವನ್ನು ಅದಾರು ತಿಳಿವ ಸಮರ್ಥರು ? ಹೇ ದೇವಾದಿದೇವಾ, ಅನ್ಯೋನ್ಯ ದೇವಾ, ನಿನ್ನ ಅಭಾವದಿಂ ದ ನಿನ್ನ ದಾಯಾದಿಯು ಮೂಯೂಜಾಲದಿಂದ ನಮ್ಮನ್ನು ಉ ದ್ಧರಿಸಿ ಕರ್ತವ್ಯನಿಷ್ಠರನ್ನಾಗಿ ಮಾಡುವ ಭಾರವು ನಿನ್ನದು. ನೀ ನೇ ಎಂತೆಂತಹ ಕವಿವರರಿಂದ ಗ್ರಂಥಗಳಲ್ಲಿ "ಹುಟ್ಟಿದ ಮನು ಷ್ಯನಿಗೆ ಹೆಗ್ಗುರುತೆಂದರೆ ಕರ್ತವ್ಯ, ಕರ್ತವ್ಯ" ವೆಂದು ಬರೆಸಿ ರುವೆ ? ಅದೆಂತಹ ಕರ್ತವ್ಯ ಹೊಟ್ಟೆ ಹೊರೆಯುವುದೇ ? ಮ ಕ್ಕಳ ಪೋಷಣೆಯೇ ? ಹೊಟ್ಟೆ ತುಂಬಲು ಬೇಕಾದಂಥ ಉ ದ್ಯೋಗವೇ ? ಅದೆಲ್ಲಾ ಆಗಿದ್ದರೆ ನೀನು ಪ್ರತ್ಯೇಕವಾಗಿ ಹೇ ಳಬೇಕಾಗಿರಲಿಲ್ಲ. ಇದೆಲ್ಲಾ ಹೊಟ್ಟೆ ಹುರುಗುಟ್ಟುವಾಗ ಎಲ್ಲ ರಗೂ ತಿಳಿಯುತ್ತೆ. ಅಂದರೆ ಬೇರೇ ಇರಬೇಕು. ಅದಾವುದು ? ಕಾಲಕ್ಕೆ ತಕ್ಕದ್ದು ಅಂದರೆ ಆಧರ್ಮವು ಹೆಚ್ಚಿದಾಗ ಧರ್ಮ ವನ್ನು ಹೊಡುವುದೂ, ಭಕ್ಕಿಕುಂದಿದಾಗ ಭಕ್ಕಿಯ ಮಹತ್ವ ವನ್ನು ಸಾರುವುದೂ, ದೇಶದ ಅಧೋಪತನದ ಸಮಯದಲ್ಲಿ ದೇಶೋದ್ಧಾರವೂ, ಐಕ್ಯಮತ್ಯವಿಲ್ಲದೆ ಪಂಗಡ ಪಂಗಡವಾ ಗುವಲ್ಲಿ ಅನ್ಯೋನ್ಯನ ಪ್ರತಾಪವನ್ನು ಸಾರುವದೂ, ಇಂತ ಹುದೇ ಅಲ್ಲವೇ ? ನೀನು ಹೇಳಿದ ಕರ್ತವ್ಯ. ಭಲೆ, ಅಂತೆಸಗು ವೆವು. ಈ ತನಕ ನಮ್ಮ ಭಾರತೀಯರು ಕಣ್ಣಾ ಮಿಟಿ ಮಿಟಿ ಬಿಡುತ್ತಿದ್ದವರು ಈಗ ಎಚ್ಚತ್ತುಕೊಳ್ಳುತ್ತಾ ನಿನ್ನ ಶ್ರೀಪಾಲಿಗಾ ಮೆಯನ್ನು ಬೇಡುತ್ತಿದ್ದೇವೆ. ಹೇ, ಧೀನದಯೂಸಿಂಧೋ, ನಿ ನ್ನ ಮರಹೊಕ್ಕಿರುವ ನಮ್ಮ ಉದ್ಧಾರವನ್ನು ಮಾಡಲು ನವ್ಯ ಪ್ರತಿಯೊಬ್ಬ ಭಾರತೀಯರ ಹೃದಯದೊಳಗೂ ನೀನು ನೆಲೆಯಾ ಗಿ ನಮ್ಮನ್ನು ಕರ್ತವ್ಯವಿಮುಖರನ್ನಾಗಿ ಮಾಡದೆ, ನಿನ್ನ ವಾಸ ಸ್ಥಳವಾದ ಆನಂದ ಸಾಗರವನ್ನು ನನ್ನ ಈ ಆರ್ಯವರ್ತಕ್ಕೆ ವ ರ್ಗಾಯಿಸಿಕೊಳ್ಳಬೇಕಾಗಿ ತಿರಭಾಗಿ ನಮಿಸುವೆವು. ಸ್ವಾಮಿ ವಾಚಕ ಮಹಾಶಯರೇ, ತಿಳಿದವರು ಹಳಿಯದೆ ಕೈಪಿಯನ್ನಿಡಿರಿ.

ಕರ್ನಾಟಕ ಸಾಹಿತ್ಯ ಪರಿಷತ್ತು,
ಬಸವನಗುಡಿ, ಬೆಂಗಳೂರು.

ಕರ್ನಾಟಕ ಸಾಹಿತ್ಯ ಪರಿಷತ್ತಿನ ಸದಸ್ಯರ ಗಮನಕ್ಕೆ.

ವಿಜ್ಞಾಪನೆಗಳು.

೧. ಇದೇ ಅಂಗೀರಸ ಸಂವತ್ಸರ ಪುಷ್ಯ ಶುದ್ಧ ಪಾಡ್ಯ ವಿ೦ ಬುಧವಾರ (೩೮—೧೨—೧೯೩೨)ದಿಂದ ತದಿಗೆ ತುಕ್ಕ ವಾರದ (೩೦—೧೨—೧೯೩೨)ರ ವರೆಗೆ ಕರ್ನಾಟಕ ಸಾಹಿ ತ್ಯ ಪರಿಷತ್ತಿನ ಹದಿನೆಂಟನೆಯ ಸಮ್ಮೇಳನವೂ, ಅದೇ ಶಕ್ರ ವಾರ (೩೦—೧೨—೧೯೩೨) ಬೆಳಗ್ಗೆ ೯ ಗಂಟೆಗೆ ಪರಿಷತ್ತಿನ ವಾರ್ಷಿಕ ಅಧಿವೇಶನವೂ ಮಡಿಕೇರಿಯಲ್ಲಿ ಕರ್ನಾಟಕಸಾಹಿತ್ಯ ಸಮ್ಮೇಳನ ಮಂದಿರದಲ್ಲಿ ನಡೆಯುವಂತೆ ಏರ್ಪಾಡಾಗಿರುತ್ತದೆ.

೨. ಪರಿಷತ್ತಿನ ನಿಬಂಧನೆಗಳಲ್ಲಿ ತಿದ್ದುಪಾಟುಗಳನ್ನು ಸೂಚಿಸಲಿಚ್ಛೆಯುಳ್ಳ ಪರಿಷತ್ತಿನ ಸದಸ್ಯರು ಈ ನೋಟೀಸನ್ನು ಕಳುಹಿಸಿದ ಹತ್ತು ದಿನಗಳೊಳಗಾಗಿ ತಮ್ಮ ಸೂಚನೆಗಳನ್ನು ಲಿಖಿತ ಮೂಲಕ ಪರಿಷತ್ತಿನ ಗೌ. ಕಾರ್ಯದರ್ಶಿಯವರಿಗೆ ದ ಯೆಮಾಡಿ ಕಳುಹಿಸಿಕೊಡಬೇಕು. (೩ನೆಯ ನಿಬಂಧನೆ)

೩. ಸಮ್ಮೇಳನದಲ್ಲಿ ಚರ್ಚಿಸಬೇಕೆಂದಿರುವ ವಿಷಯ ಗಳೂ, ಹೇಳಬೇಕೆಂದಿರುವ ಉಪನ್ಯಾಸಗಳೂ ಪರಿಷತ್ತಿನಿಂದ ಮೊದಲೇ ಅಂಗೀಕೃತವಾಗಿರಬೇಕು. (೨೪ನೆಯ ನಿಬಂಧನೆ) ಅಂತಹ ಅಭಿಪ್ರಾಯಗಳುಳ್ಳವರು ಅವುಗಳ ನಕಲನ್ನು ಇದೇ ದಿ ನಂಬರು ತಿಂಗಳು ೧೫ನೆಯ ತಾರೀಖಿನೊಳಗಾಗಿ ಪರಿಷತ್ತಿನ ಗೌ. ಕಾರ್ಯದರ್ಶಿಯವರಿಗೆ ತಲಪುವಂತೆ ದಯವಿಟ್ಟು ಬೆಂಗ ಳೂರಿಗೆ ಕಳುಹಿಸಿಕೊಡಬೇಕು.

೪. ಉಪನ್ಯಾಸಗಳು ಮುಂದೆ ಹೇಳುವ ವಿಷಯಗಳ ಮೇ ಲೆ ಇರಬೇಕು:—(೧) ಪ್ರಾಚೀನ, ಅಥವಾ ನವೀನ ಗದ್ಯ, ಅ ಥವಾ ಪದ್ಯ ಕಾವ್ಯಗಳು, (೨) ನಾಟಕಗಳು, (೩) ನಾವೆಲು ಗಳು, (೪) ಕಾವ್ಯಾಲಂಕಾರ, ವ್ಯಾಕರಣ ವಿಷಯಗಳು ಮ ತ್ತು ಭಾಷಾ ಮರ್ಯಾದೆಗಳು, (೫) ಪ್ರಾಚೀನ, ಅಥವಾ ನ ವೀನ ಇತಿಹಾಸಗಳು.

ಬಿ. ಕೆ. ವೆಂಕಟರಾಮಯ್ಯ,
ಯಂ. ಎ., ಎಲ್‌ಎಲ್. ಬಿ.
ಗೌ. ಕಾರ್ಯದರ್ಶಿ.

ಸೆಂಟ್ರಲ್ ಬ್ಯಾಂಕ್ ವಿಷಯ.

ಈ ಬ್ಯಾಂಕಿನ ಡೈರೆಕ್ಟರುಗಳ ವಿಷಯವಾಗಿ ತಾರೀಕು 26—11—1932ರಲ್ಲಿ ಬ್ಯಾಂಕಿನ ಆಫೀಸಿನಲ್ಲಿ ಬೆಳಿಗ್ಗೆ 11 ಗಂ ಟೆಗೆ ನಡೆಯಿತು. ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. 1. ರಾ. ಬಾ. ಪಟ್ಟಮಾಡ ದೇವಯ್ಯನವರು (ಪ್ರೆಸಿಡೆಂಟರು), 2. ಮೆ. ಗಳಾದ ಪಾಂಡಂಡ ಚಂಗಪ್ಪನವರು, 3. ಅಪ್ಪಾರಂಡ ಚಂಗಪ್ಪನವರು, 4. ಮನೆಯಪಂಡ ಬೆಳ್ಯಪ್ಪನವರು (ಟ್ರೆಜರರ್), 5. ಕೋಡಿರ ತಮ್ಮಯ್ಯನವರು, 6. ಕೊಂಗಂಡ ಗಣಪತಿಯ ವರು, 7. ಪುಚ್ಚಿಮಾಡ ರೂದಯ್ಯನವರುಮತ್ತು, 8. ನಡಿಕೇರಿ ಯಂಡ ಸೋಮಯ್ಯನವರು.

1. ಕಳೆದ ಎಂಟಿಂಗಿನ ಪ್ರೊಸಿಡಿಂಗ್ಸನ್ನು ಓದಿ ಒಪ್ಪಲಾ ಯಿತು.

2. ಕಳೆದ ಅಕ್ಟೋಬರ್ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮಂಜೂರು ಮಾಡಲಾಯಿತು.

ಕಳೆದ ತಿಂಗಳ ಸಿಲ್ಕು	ರೂ.	10370	12	11
ಈ ತಿಂಗಳಲ್ಲಿ ವಸೂಲಿ	,,	4663	2	0
ಜುಮ್ಲ	,,	15033	14	11
ಈ ತಿಂಗಳಲ್ಲಿ ಖರ್ಚು	,,	4160	9	0
ಜಾತ ಸಿಲ್ಕು	,,	10873	5	11

3. ಈ ಕೆಳಗಿನ ಸಂಘಗಳಿಗೆ ಸಾಲ ಮಂಜೂರು ಮಾ ಡಲಾದವು—(1) ಬೇಟೋಳಿ ಸೊಸೈಟಿಗೆ ರೂ. 200 ಮತ್ತು (2) ಅಮ್ಮತ್ತಿ ಸೊಸೈಟಿಗೆ ರೂ. 1000.

4. ಕಳೆದ ಎಂಟಿಂಗಿನಲ್ಲಿ ತೀರ್ಮಾನವಾದ ಮೇರೆ ಸಬ್ ಕಮಿಟಿಯವರು ತಯಾರಿಸಿದ ಪ್ರಾವಿಡೆಂಟ್ ಫಂಡಿನ ಕರಡು ರೂಲ್ಸ್ ಓದಲಾಯಿತು.

ಈ ಮೇಲ್ಕಂಡ ರೂಲ್ಸನ್ನು ಮಂಜೂರುಮಾಡುವುದಕ್ಕೆ ಮೊದಲು ಎಲ್ಲಾ ಡೈರೆಕ್ಟರುಗಳಿಗೂ ಈ ರೂಲ್ಸಿನ ಒಂದೊಂದು ನಕಲನ್ನು ಕಳುಹಿಸಬೇಕೆಂತ ತೀರ್ಮಾನವಾಯಿತ.

5. ಸೌತ್ ಇಂಡಿಯಾ ಕೋ-ಆಪರೇಟಿವ ಇನ್‌ಶ್ಯೂ ರೆನ್ಸ್ ಸೊಸೈಟಿಯವರನ್ನಿಯನ್ನು ಸೆಂಟ್ರಲ್ ಬ್ಯಾಂಕಿನಲ್ಲಿ ತೆಗೆ ದುಕೊಳ್ಳುವ ವಿಷಯ ಚರ್ಚಿಸಿ, ಈ ಇನ್‌ಶ್ಯೂರೆನ್ಸ್ ವಿಷಯ ಹೆಚ್ಚಿನ ಸಂಗತಿ ತಿಳಿಕೊಳ್ಳುವ ಬಗ್ಗೆ ಇನ್ನೊಂದು ವಿಂಟಿಂಗಿಗೆ ಮುಂದೂಡಿ ಇಡಬೇಕೆಂತ ತೀರ್ಮಾನವಾಯಿತ.

6. ಸೆಂಟ್ರಲ್ ಬ್ಯಾಂಕಿನ ಬೈಲಾ 31 (ಬಿ)ಗೆ ಅನುಗುಣ ವಾಗಿ ಕೋ-ಆಪರೇಟಿವ್ ಫೆಡರೇಶನ್ನಿನವರು ಸೊಸೈಟಿಗಳ ಮೇಲು ವಿಚಾರಣೆಗಳನ್ನು ನಡೆಸಲುಒಪ್ಪಿಕೊಂಡಿದ್ದೇವೆಂತ ಕಳುಹಿಸಿದ ಪತ್ರವನ್ನು ಓದಲಾಯಿತು.

ಫೆಡರೇಶನ್ನಿನವರು ಯಾವ ಶರತ್ತಿನ ಮೇಲೆ ಬ್ಯಾಂಕಿನ ಮೆಂಬರು ಸಂಘಗಳ ಮೇಲು ವಿಚಾರಣೆಗಳನ್ನು ನೋಡಿಕೊ ಳ್ಳಲು ಒಪ್ಪಿಕೊಂಡಿರುತ್ತಾರೆಂಬದನ್ನು ಅವರನ್ನು ಕೇಳಬೇಕೆಂತ ತೀರ್ಮಾನವಾಯಿತು.

7. ಕೋ-ಆಪರೇಟಿವ್ ಫೆಡರೇಶನ್ನಿನ ಜನರಲ್ ವಿಂಟಿಂ ಗಿಗೆ 5 ಡೆಲಿಗೇಟರನ್ನು ಕಳುಹಿಸಬೇಕೆಂತ ಕಳುಹಿಸಿದ ನೋ ಟೀಸು ಓದಲಾಯಿತು.

8. ಮೆ. ಪುಚ್ಚಿಮಾಡ ಮೂದಯ್ಯನವರು 50ರಿಂದ 500 ರೂಪಾಯಿಗಳ ವರೆಗೆ ಸೆಂಟ್ರಲ್ ಬ್ಯಾಂಕಿನಲ್ಲಿ ಫಿಕ್ಸೆಡ್ ಡಿಪಾ ಜಿಟ್ಟು ಹೊಂದಿಕೊಳ್ಳಲು ಒಪ್ಪಿಕೊಳ್ಳಬೇಕೆಂತ ಬರೆದ ಪತ್ರವ ನ್ನು ಓದಲಾಯಿತು.

ಇವರ ಕರಾವಿಗೆ ಅನುಮೋದಿಸುವವರು ಯಾರೂ ಇಲ್ಲ ದ್ದರಿಂದ ಅದನ್ನು ಚರ್ಚಿಸಲಿಲ್ಲ.

9. ಮಡಿಕೇರಿಯಲ್ಲಿರುವ ಕೆ. ಬಿ. ಕಾವೇರಮ್ಮನವರು ಬ್ಯಾಂಕಿನಲ್ಲಿರುವ ತನ್ನ ತೇರನ್ನು ವಾಪಸು ಕೊಡಬೇಕಾಗಿ ಬರಕೊಂಡ ಅರ್ಜಿ ಓದಲಾಯಿತು.

ತೇರು ಮೊಬಲಗನ್ನು ವಾಪಸು ಕೊಡಬಹುದಾಗಿ ತೀರ್ಮಾನವಾಯಿತು.

10. ಚೀಫ್ ಕಮಿಷನರ್ ಸಾಹೇಬರವರಿಂದ ಫೆಡರೇಶನ್ ಮತ್ತು ಯೂನಿಯನ್‌ಗಳು ಈಗ ನಡೆಸುತ್ತಿರುವ ಸಂಘಗಳ ಮೇಲು ವಿಚಾರಣೆಗಳನ್ನು ಸೆಂಟ್ರಲ್ ಬ್ಯಾಂಕು ವಹಿಸುವ ವಿ ಷಯದಲ್ಲಿ ಬಂದ ಕಾಗದ ಓದಲಾಯಿತು.

ಕೊಡಗು ಸಹಕಾರಿ ಸಂಘಗಳ 1932ನೇ ಇಸವಿ ಜೂನ್ 30ಕ್ಕೆ ಅಖೈರು ಆದ ವಾರ್ಷಿಕ ರಿಪೋರ್ಟಿನ 13ನೇ ಪ್ಯಾರಾ ದಲ್ಲಿ ಸಿಪಾರಸ್ಸು ಮಾಡಿರುವ ಮೇರೆ ಫೆಡರೇಶನ್ ಮತ್ತು ಸೆಂ ಟ್ರಲ್ ಬ್ಯಾಂಕಿನ ಕೆಲಸಗಳನ್ನು ಜೋತೆಸೇರಿಸುವ ವಿಷಯದಲ್ಲಿ ಯಾವ ರೀತಿ ನಡಿಸಬೇಕೆಂಬ ಬಗ್ಗೆ ಕೋ-ಆಪರೇಟಿವ್ ರಿಜಿ ಸ್ಟ್ರಾರರನ್ನು ಬರೆದುಕೊಳ್ಳುವಂತೆ ತೀರ್ಮಾನವಾಯಿತು.

11. ಮಡಿಕೇರಿ ನಾಡು ಕೋ-ಆಪರೇಟಿವ್ ಸೈಂರಿನ ಗೌರವ ಸೆಕ್ರೆಟರಿಯವರು ಸದರಿ ಸೈಂರಿಗೆ ತಾ. 30—3—32 ರಲ್ಲಿ ಮಂಜೂರು ಮಾಡಿದ 3ನೇ ಸಾಲದ ಮರುವಾವತಿ ಕಂತು 2ನೇ ಸಾಲದ ಮರುವಾವತಿ ತೀರಿದನಂತರ ಮುಂದೂಸಿ ಕೊಡಬೇಕಾಗಿ ಬರಕೊಂಡ ಪತ್ರವನ್ನು ಓದಲಾಯಿತು.

ಅವರ ಕೋರಿಕೆ ಮೇರೆ 2ನೆಯ ಸಾಲದ ಮರುವಾವತಿ ಕಂತು ತೀರಿದ ನಂತರ ತಾ. 1—3—33ರಿಂದ ವ್ಯಾರಂಭಿಸಬಹು ದಾಗಿ ತೀರ್ಮಾನವಾಯಿತು.

12. ಡೈರೆಕ್ಟರುಗಳ ಮಂಜೂರಾತಿ ನಿರೀಕ್ಷಣೆಯಿಂದ ಒಂದು ಸಾವಿರ ರೂಪಾಯಿ ಫಿಕ್ಸೆಡ್ ಡಿಪಾಜಿಟ್ಟು (ನಿರಕು ತೇವಣಾತಿ) ತೆಗೆದುಕೊಂಡದ್ದನ್ನು ಮಂಜೂರ್ಮಾಡಿದ್ದಲ್ಲದೆ ಪುನಃ ನಾಲ್ಕು ಸಾವಿರ ರೂಪಾಯಿ ಡಿಪಾಜಿಟ್ಟು ತೆಗೆದುಕೊ ಳ್ಳಬಹುದಾಗಿ ತೀರ್ಮಾನವಾಯಿತು.

ಪಿ. ದೇವಯ್ಯ,
(ಅಧ್ಯಕ್ಷರು.)

(FREE INSURANCE)
ಉಚಿತ ವಿಮಾ.
ಮ್ಯೂಚುವಲ್ ಬೆನಿಫಿಟ್ ಸ್ಕೀಂ ಎಂಬ ಅನ್ಯೋನ್ಯ ಸಹಾಯ ಪದ್ಧತಿ.
(Mutual Benefit Scheme.)

ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸು—ಮದ್ರಾಸ್.

ಲೈಫ್ ಇನ್‌ಷ್ಯೂರೆನ್ಸಿನ ಕಂಪೆನಿಗಳ ಕಾನೂನಿಗೆ ಅಧೀನ ವಾಗಿದೆ. ಸರಕಾರದಲ್ಲಿಡಬೇಕಾದ ತೇವಣಾತಿ ಇಡಲಾಗಿದೆ.

ಈ ಮೇಲ್ಕಂಡ ಕಂಪೆನಿಯು ಅನ್ಯೋನ್ಯ ಸಹಾಯಕ್ಕಾ ಗಿ ಕಳೆದ ವರ್ಷ ಅಂದರೆ 1931ನೇ ಫೆಬ್ರವರಿಯಲ್ಲಿ ಮದ್ರಾ ಸಿನಲ್ಲು ಸ್ಥಾಪಿತವಾಗಿ ಈ ವರೆಗೆ 26000 ಸಾವಿರಕ್ಕೂ ಹೆ ಚ್ಚಾಗಿ ಪಾಲಿಸಿಗಳನ್ನು ಪಡೆದಿರುತ್ತೆ. ಈ ಮೇಲ್ಕಂಡ ಕಂಪೆ ನಿಗೆ ಐಶ್ವರ್ಯವಂತರೂ, ಬಡವರೂ, ಮಿತಸಂಪಾದನೆಯವರೂ, ಜಾತಿ ಮತಗಳ ಬೇಧವಿಲ್ಲದೆ ಜಾತಿವಾರೂ, ಕೋಮುವಾ ರೂ, ಹೆಂಗಸರೂ, ಗಂಡಸರೂ ಹೆಚ್ಚು ರುಸುಂ ಕೊಡದೆಯೇ ಉಚಿತ ಜೀವ ವಿಮೆ ಮಾಡಿಕೊಳ್ಳಬಹುದು. 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಈ ಕಂಪೆನಿಗೆ ಸೇರ ಬಹುದು. ಈ ಕಂಪೆನಿಗೆ ಸೇರಲು ಇಚ್ಛಿಸುವವರು ಸುರು ವಿನಲ್ಲಿ ರೂ. 5—8—0ನ್ನು ಮೂತ್ಯ ಕಟ್ಟಬೇಕಾಗ್ಗುದ್ದು. ಅನಂತರ ತಿಂಗಳು ಒಂದರ 1 ರೂ. ಸ್ವಲ್ಪದರಲ್ಲು ದೊಡ್ಡ ಲಾಭ ದೊ ರೆಯುತ್ತೆ. ಆದ್ದರಿಂದ ಇಂಥಾ ಸುಸಮಯವನ್ನು ಕಳೆದುಕೊ ಳ್ಳಬೇಡಿ. ಈ ದಿನವೇ ಪಾಲಿಸಿಗಳನ್ನು ಹೊಂದಲು ಅರ್ಹರಾ ಗಿರಿ. ಇದರ ಫಲವನ್ನು ಹೊಂದಲು ಭಾಗಿಗಳಾಗಿರಿ.

ಹೆಚ್ಚಿನ ಮಾಹಿತಿಗಳಿಗೆ ಈ ಕೆಳಗಿನವರಿಗೆ ಬರೆದು ತಿಳಿದು ಕೊಳ್ಳಬಹುದು. ಅಲ್ಲದೆ ಇವರು ಕೊಡಗಿನ ಎಲ್ಲಾ ಕಡೆ ಗಳಲ್ಲಿಯೂ ತಿರುಗುತ್ತಲಿರುತ್ತಾರೆ.

ಯನ್. ಬಿ. ಕರುಂಬಯ್ಯ.
ಏಜೆಂಟ್,
ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
12—7 ನಾಪೋಕ್ಲು, (ಕೊಡಗು)

ಯಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು, ಇವರ

ಅನುಭವ ಸಿದ್ಧ ಔಷಧಗಳು.

೧. ಧಾತುಪುಷ್ಟಿ ಲೇಹ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

೨. ಅಶೋಕಾರಿಷ್ಟ ಮತ್ತು ಮೂತ್ರೆ—ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾ ನಹೀನತೆ, ಮೂರ್ಛೆ, ಮಲಬದ್ಧತೆ, ರಕ್ತಹೀನತೆ, ಕೈ ಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಗುಣಪಡಿಸುವದು. 1 ಬಾಟ್ಲಿ ಔಷಧಕ್ಕೂ, 1 ಡಬ್ಬಿ ಮೂತ್ರೆಗೂ ರೂ. 2—4—0; 2ಕ್ಕೆ ರೂ. 4—4—0.

೩. ಮೇಹಕುಠಾರ—ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0; 3ಕ್ಕೆ ರೂ. 7—0—0.

೪. ಬಾಲಾಗ್ರಹ ಗುಟಿಕೆ—ಬಾಲಾಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ವೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ ರೂ. 0—10—0. 3ಕ್ಕೆ ರೂ. 1—12—0.

(52—11)

ವರ್ತಮಾನ ಸಂಗ್ರಹ.

ಒಳದೇಶ.

ಕೊಡಗಿನ ಭವಿಷ್ಯತ್ತನ್ನು ಕುರಿತು ಆಲೋಚಿಸಲು ಕೊಡವ ಸಭೆಯು ಎಂಟಿಂಗೊಂದು ಈ ತಾ. 10 ರಲ್ಲಿ ಮಡಿಕೇರಿಯಲ್ಲಿ ನಡೆಯುವದೆಂದು ತಿಳಿಯಬರುತ್ತದೆ.

ಈ ತಾ. 12 ನೇ ಸೋಮವಾರ (ಹುತ್ತರಿ) ಅವಮನೆ ಪೊಳುನೂ, ತಾ. 13 ನೇ ಮಂಗಳವಾರ ನಾಡುಪೊಳುದೂ ಆಗುವದೆಂದು ಮುಜ್ರಾಯಿ ಇಲಾಖೆಯವರು ಪ್ರಕಟಿಸಿರುವರು. ಇದರ ವಿವರವು ಇನ್ನೊಂದು ಕಡೆ ಕೊಡಲಾಗಿದೆ.

ಮಡಿಕೇರಿ ವೇದಾಂತ ಸಂಘದವರು 'ಗೀತಾಜಯಂತಿ' ಉತ್ಸವವನ್ನು ಈ ತಾ. 8 ನೇ ಗುರುವಾರ ಜಮೊನ್ದಾರರ ಸಂಘದ ಹಾಲ್‌ನಲ್ಲಿ ವೆ. ಆರ್. ಹೆಚ್. ಶಣೈಯವರ ಅಧ್ಯಕ್ಷತೆಯಲ್ಲಿ ನಡಿಸುವರೆಂದು ತಿಳಿಯುತ್ತೇವೆ.

ಫಾರೆಸ್ಟರಾಗಿದ್ದ ಮೆ. ಮಂಡೇಪಂಡ ಅಪ್ಪಯ್ಯನವರು ಕೋವೆಕಾಯಿಲೆಯಿಂದ ತಾ. 23 ರಲ್ಲಿ ಫ್ರೇಜರ್‌ಪೇಟೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಯಲು ವ್ಯಸನಪಡುತ್ತೇವೆ. ಅವರ ಶವವನ್ನು ಅವರ ನಾಡುಮನೆಗೆ ಸಾಗಿಸಿ ದಫನ ಮಾಡಲಾಯಿತು.

ಹತ್ತು ದಿವಸಗಳ ವರೆಗೆ ನಾಗರ ಹೊಳೆ ಫಾರೆಸ್ಟ್ ಕ್ಯಾಂಪಿನಲ್ಲಿದ್ದ ಚೀಫ್ ಕಮಿಷನರವರು ಕಳೆದ ತಾ. 26 ರಲ್ಲಿ ಬೆಂಗಳೂರಿಗೆ ವಾಪಸು ಹೋದರೆಂತಲೂ, ತಾ. 29 ರಲ್ಲಿ ಪುನಹ ಕೊಡಗಿಗೆ ಬಂದು ಶ್ರೀಮಂಗಲದಲ್ಲಿ ಹತ್ತು ದಿವಸಗಳು ಕ್ಯಾಂಪ್ ಮಾಡುವರೆಂದೂ ವರ್ತಮಾನ.

ಸುಬ್ರಮಣ್ಯ ಶಷ್ಟಿ ದಿನವಾದ ಈ ತಾ 3 ನೇ ಶನಿವಾರ ಜಮೊನ್ದಾರರ ಸಂಘದ ಹಾಲ್‌ನಲ್ಲು ಮಹಾತ್ಮ ಕಬೀರ್‌ದಾಸರ ಜೀವಚರಿತ್ರೆಯನ್ನು ಕುರಿತು ಮೆ. ಬಿ. ಕೆ. ಸುಬ್ಬಾಯರು ಸಾಯಂಕಾಲ 5½ ಯಿಂದ 8½ ಗಂಟೆ ವರೆಗೆ ಹರಿಕಥೆ ಮಾಡುತ್ತಾರೆಂದೂ, ಸರ್ವರಿಗೂ ಆಮಂತ್ರಣವಿದೆಯೆಂದೂ ವೇದಾಂತ ಸಂಘದ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಕಳೆದ ತಾ. 21 ರಲ್ಲಿ ಹುದಿಕೇರಿಯಲ್ಲಿ ಸತ್ಯಾಗ್ರಹ ಹಸ್ತಪತ್ರಗಳನ್ನು ಹುಚಿದಕ್ಕಾಗಿ ದಸ್ತಗಿರಿ ಮಾಡಲ್ಪಟ್ಟಿದ್ದ ಮೆ. ಜೊಟ್ಟಿಯಂಡಮಾಡ ಐಯ್ಯಣ್ಣನವರ ಮತ್ತು ಅಗಸ ಮೆ. ಬಣ್ಣರ ಐಯ್ಯರವರ ವಿಚಾರವು ತಾ 29ರಲ್ಲಿ ನಡೆದಾಗ್ಯೆ, ಅವರು ಇನ್ನು ಅಂಥಾ ಕೆಲಸಮಾಡುವುದಿಲ್ಲವೆಂದು ಹೇಳಿದರೆಂದೂ, ಅದಕಾರಣ ಅವರನ್ನು ಬಿಡುಗಡೆಮಾಡಿದರೆಂದೂ ವರ್ತಮಾನ.

ಕ್ಯಾನ್‌ವೆಲ್ಲ್‌ನಲ್ಲಿರುವ ಇಂಡಿಯನ್ ಮಿಲಿಟರಿ ಎಕಾಡಮಿ ವತ್ತು ರಾಯಲ್ ಏರ್ ಫೋರ್ಸ್ ಕಾಲೇಜಿನ ಪ್ರವೇಶಕ್ಕಾಗಿ 1933 ನೇ ಮಾರ್ಚ್ ತಾ. 27 ರಲ್ಲಿ ಡೆಲ್ಲಿಯಲ್ಲಿ ಸ್ಪರ್ಧೆಯ ಪರೀಕ್ಷೆಯು ನಡೆಯುವದೆಂದೂ, ಈ ಪರೀಕ್ಷೆಗೆ ಹೋಗಲು ಇಚ್ಛಿಸುವವರು ಈ ತಾ. 20 ರೊಳಗೆ ತಮ್ಮ ಅಪ್ಲಿಕೇಶನುಗಳನ್ನು ಕಳುಹಿಸತಕ್ಕದೆಂತಲೂ, ಅಪ್ಲಿಕೇಶನ್ ಫಾರಮುಗಳು ಮತ್ತು ಪರೀಕ್ಷೆಗೆ ಸಂಬಂಧಪಟ್ಟ ನಿಬಂಧನೆಗಳನ್ನು ಪಬ್ಲಿಕ್ ಸರ್ವಿಸ್ ಕಮಿಷನಿನ ಸೆಕ್ರೆಟರಿ, ವೆಲ್ಲಿಂಗ್ಟನ್ ಹೌಸ್, ಡೆಲ್ಲಿ, ಇವರಿಂದ ಪಡಕೊಳ್ಳಬಹುದೆಂದೂ ಪ್ರಕಟವಾಗಿದೆ.

ಮಡಿಕೇರಿಯಲ್ಲಿ ಹುಂಗಾಮಿ ವೆಟರಿನರಿ ಅಸಿಸ್ಟೆಂಟ್ ಸರ್ಜನರಾಗಿದ್ದ ಮೆ. ಕೇಚಮಾಡ ಬೆಳ್ಯಪ್ಪನವರು ಸನ್ನಿಪಾತ ಜ್ವರದಿಂದ ಪೀಡಿತರಾಗಿ ಸುಮಾರು ಒಂದೂವರೆ ತಿಂಗಳಿಂದ ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದ್ದು, ಸ್ವಲ್ಪ ವಾಸಿಯಾಗಿ, ಕಳೆದ ತಾ. 27 ರಲ್ಲಿ ಅವರ ಮನೆಗೆ ಸಾಗಿಸಲ್ಪಟ್ಟವರು, ಜ್ವರ ಪುನಹ ತೊಡಗಿ ತಾ. 30 ರಲ್ಲಿ ವೀರಾಜಪೇಟೆ ಆಸ್ಪತ್ರೆಗೆ ತರಲ್ಪಟ್ಟು, ಅಲ್ಲಿ ಅದೇ ದಿನ ಸಾಯಂಕಾಲ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ವೆಟರಿನರಿ ಕಾಲೇಜಿನ ತಮ್ಮ ಪರೀಕ್ಷೆಯಲ್ಲಿ ಮದ್ರಾಸು ಪ್ರಾಂತ್ಯದಲ್ಲೇ 1 ನೇಯದಾಗಿ ತೇರ್ಗಡೆಹೊಂದಿದ್ದರು.

ಹಿಂದೂದೇಶ.

ತಿರುವಾಂಕೂರಿನ ಒಂದು ಕಾಡಿನಲ್ಲಿ ಬಿಳೀ ಆನೆಯೊಂದು ಕಾಣಿಸಿಕೊಂಡಿದೆಯೆಂದೂ, ಅದನ್ನು ಕೊಲ್ಲದೆ, ಸಾಹಸಪಟ್ಟು ಹಿಡಿಯಬೇಕೆಂದು ಅಲ್ಲಿಯ ರಾಜರು ಹುಕುಂ ಮಾಡಿರುವರೆಂದೂ ವರ್ತಮಾನ.

ಶ್ರೀ ಎಂ. ವಿ. ಅಭ್ಯಂಕರ ಮೇಲೆ ವಿಧಿಸಿದ್ದ ಜುಲ್ಮಾನೆಯನ್ನು ಪಡೆಯಲು ಅವರ ಮೋಟಾರನ್ನು ಹರಾಜು ಮಾಡಿದರು. ಇದನ್ನು ಮೆ. ಖೈಲಾಟ್ಕರ್ ಎಂಬುವರು ಕೊಂಡು, ಅದನ್ನು ಶ್ರೀ ಅಭ್ಯಂಕರರ ಪತ್ನಿಯವರಿಗೆ ಕೊಟ್ಟಿರುವರು.

೨೪ ದಿನಗಳಿಂದ ಉಪವಾಸವನ್ನು ಕೈಕೊಂಡ ರಾಜಮಹೇಂದ್ರಿಯ ರಾಜಕೀಯ ಕೈದಿಗಳನ್ನು ಆಸ್ಪತ್ರೆಗೊಯ್ದಿರುವರು. ಒಲಾತ್ಕಾರದಿಂದ ಆಹಾರ ಕೊಟ್ಟದನ್ನಿವರು ಬಲಾತ್ಕಾರದ ವಾಂತಿಯಿಂದಲೇ ಹೊರಗೆ ಸುರಿಯುತ್ತಿರುವರಾದ ಕಾರಣ ಮಹಾಸಂಕಟನಾಗಿದೆ.

ಮುಂಬಯಿಯಲ್ಲಿ ಸ್ವಯಂಸೇವಕರು ಎರಡನೇ ಪೈಸಡೆನ್ನಿ ಮ್ಯಾಜಿಸ್ಟ್ರೇಟರ ಕೋರ್ಟಿನೊಳಕ್ಕೆ ನುಗ್ಗಿ ಹಾಡುಗಳನ್ನು ಹೇಳುತ್ತಾ, ಮ್ಯಾಜಿಸ್ಟ್ರೇಟರು ರಾಜೀನಾಮೆ ಕೊಡಲಿ ಎಂಬುದಾಗಿ ಬರೆದಿದ್ದ ಕರಪತ್ರಗಳನ್ನು ಹಂಚಿದರು. ಸ್ವಯಂಸೇವಕರನ್ನು ಕೂಡಲೆ ದಸ್ತಗಿರಿ ಮಾಡಿದರು.

ಮದ್ರಾಸ್ ಕರೆನ್ಸಿ ಆಫೀಸಿನಿಂದ ಕಳೆದ ತಾ ೧೫ ರಲ್ಲಿ ೫೦ ಸಾವಿರದ ನೋಟನ್ನು ಚಲಾವಣೆ ಮಾಡಿದ್ದ ಅದೇ ಆಫೀಸಿನ ಕ್ಲಾರ್ಕನಾದ ಜಿ. ಪೆರಿಯ ಅಳ್ವಾರ ಪಿಳ್ಳೆಯನ್ನು ೨೮೧೦೦ ರೂಗಳ ನೋಟುಗಳೊಂದಿಗೆ ಚಿತ್ತೂರಿನಲ್ಲಿ ಹಸ್ತಗಿರಿ ಮಾಡದೆ. ಇವನ ಐಶ್ವರ್ಯದ ಆಯುಷ್ಯ, ಪಾಪ, ಎಂಟೇ ದಿನ.

'ಭಾರತ ದೇಶೀಯ ಸಂಸ್ಥಾನಾಧಿಪತಿಗಳಿಗೆ ಸಮುಯೋಚಿತ ಭದ್ರತೆಗಳು ಶಾಸನದಲ್ಲಿ ನೆರಿಸಲ್ಪಟ್ಟರೆ ಮಾತ್ರ ಅವರು ಫೆಡರೇಶನಿಗೆ ಸೇರಲು ಒಪ್ಪುವರು' ಎಂದು ಕಳೆದ ತಾ. 14 ರಲ್ಲಿ ಲಂಡನ್ನಿನಲ್ಲಿ ನೆರೆದಿದ್ದ ಕನ್‌ಸರ್ವೇಟಿವ್ ಇಂಡಿಯಾ ಕಮಿಟಿಯವರ ಸಭೆಯಲ್ಲಿ ನವನಗರದ ಮಹಾರಾಜರು ಮಾಡಿದ ಭಾಷಣದಲ್ಲಿ ಹೇಳಿದರು.

ಪಂಚಮರೆಂದು ಕರೆಯಲ್ಪಡುತ್ತಿರುವ ಜಾತಿಯವರು ಅಸ್ಪೃಶ್ಯರೆಂಬುದು ಅಶಾಸ್ತ್ರೀಯವೆಂದೂ, ಅವರು ದೇವಾಲಯಗಳಿಗೆ ಬರುವುದು ಶಾಸ್ತ್ರಸಮ್ಮತವೆಂದೂ ಬಂಕುಪಲ್ಲಿ ಮಲ್ಲಿಯ ಶಾಸ್ತ್ರಿಗಳು ಪ್ರಕಟಿಸಿರುವರಲ್ಲದೆ, ಈ ವಿಷಯವನ್ನು ಸಿದ್ಧಾಂತಪಡಿಸಲು ಪಂಡಿತರುಗಳ ಸಭೆಯೊಂದನ್ನು ಸೇರಿಸಬೇಕೆಂದೂ ಸೂಚಿಸಿರುವರು.

ಬರೋಡಾ ಸಂಸ್ಥಾನದವರು ೧೯೩೫ ನೇ ಇಸವಿಯಿಂದ ಹಿಂದೀಯನ್ನು ರಾಜಭಾಷೆಯನ್ನಾಗಿ ಸ್ವೀಕರಿಸಿ, ವ್ಯವಹಾರಕ್ಕೆ ಹಚ್ಚುವರು. ಅಷ್ಟರೊಳಗೆ ಸರಕಾರೀ ನೌಕರರೆಲ್ಲ ಹಿಂದಿಯಲ್ಲಿ ತರಬೇತಿಹೊಂದಿ,—ಪರೀಕ್ಷೆಕೊಡಬೇಕಾಗಿ ತಿಳಿಸಲಾಗಿದೆ. ಅಲ್ಲಲ್ಲಿ ಹಿಂದೀ ಶಾಲೆಗಳನ್ನೂ ಕ್ಲಾಸುಗಳನ್ನೂ ತೆರವ ವ್ಯವಸ್ಥೆಯಾಗುತ್ತಿದೆ

ದೇವದಾಸ್ ಗಾಂಧಿಯವರು ಮಂಗಳವಾರದ ದಿವಸ ಎರವಾಡಾ ಜೈಲಿನಲ್ಲಿ ಗಾಂಧಿಯವರನ್ನು ನೋಡಿಕೊಂಡು ಬಂದರು. ಒಳಕ್ಕೆಯಲ್ಲಿ ನೋವುಂಟಾಗಿಸೆ ಎಂದೂ ಆ ಬಗ್ಗೆ ಮೇಜರ್ ಭಾಂಡಾರಿಯವರೂ ಮತ್ತು ಡಾ. ಮೆಹತರವರೂ ಚಿಕಿತ್ಸೆ ನಡಿಸುತ್ತಿದ್ದಾರೆಂದೂ, ಅವರ ತೂಕವು ಈಗ ೧೨೩. ೫ ಪೌಂಡುಗಳಿವೆಯೆಂದೂ, ಮುಂಥಾಗಿ ದೇವದಾಸರು ತಿಳಿಸಿದ್ದಾರೆ.

'ನಾನು ಈಗ ಕುಡಿಯನ್ನು ಬೆಳೆಸತಕ್ಕ ಪದಾರ್ಥಗಳನ್ನೂ ಪುಷ್ಟಿಯನ್ನುಂಟುಮಾಡತಕ್ಕ ಪದಾರ್ಥ (ಟಾನಿಕ್ಕು)ಗಳನ್ನೂ ಸೇವಿಸುವುದಿಲ್ಲ. ಮೇಕೆ ಹಾಲು, ಹೊಟ್ಟು ಸನೇತವಾದ ಗೋದಿರೊಟ್ಟಿ, ನೀರಿನಲ್ಲಿ ನೆನೆ ಹಾಕಿದ ಖರ್ಜೂರ, ಬೇಯಿಸಿದ ಟೊಮೇಟೊ, ಕಿತ್ತಳೆ ಹಣ್ಣು ಇವುಗಳನ್ನು ಮಾತ್ರ ಸೇವಿಸುತ್ತಿದ್ದೇನೆ ರೊಟ್ಟಿಯಿಂದಲೂ, ಹಾಲಿನಿಂದಲೂ ಕೊಂಚ ಮಾಂಸನರ್ಧಕ ಪದಾರ್ಥವು ನನಗೆ ಲಭಿಸುತ್ತಿದೆ.' ಎಂದು ಮಹಾತ್ಮರು ಒಬ್ಬ ಸ್ನೇಹಿತರಿಗೆ ಬರೆದಿರುತ್ತಾರೆ.

ಪೀಠಾಪುರದ ಭಾರತಿ ತೀರ್ಥೋತ್ಸವಾಧ್ಯಾಯ ವಡಲಿ ಸೀತಾರಾಮಯ್ಯನವರು ಮಹಾತ್ಮಗಾಂಧಿಯವರ ಜನನ ಕುಂಡಲಿ ಹಾಕಿ, ತಾತ್ಕಾಲಿಕ ಗ್ರಹಚಾರವನ್ನು ಗುಣಿಸಿ ಫಲವನ್ನು ಪ್ರಕಟಿಸಿರುವುದರಲ್ಲಿ ಮಹಾತ್ಮರ ಆರೋಗ್ಯವು ಈ ತಾ. 14ರ ಮೇಲೆ ವೃದ್ಧಿಯಾಗಿ ಸಂಕಲ್ಪವು ಸಿದ್ಧಿಸುವದೆಂದೂ, 1933 ನೇ ಜನವರಿ ತಿಂಗಳು ಕಳೆದ ಮೇಲೆ ರಾಜಕೀಯ ವಿಚಾರದಲ್ಲಿ ಜಯವಾಗಲು ತಕ್ಕ ವಿಸ್ತಾರ್ಥ ನಡೆಯುವದೆಂದೂ ತಿಳಿಸಿರುತ್ತಾರೆ. ಇದರ ನಿಜಾಂತರವನ್ನು ಮುಂದೆ ನೋಡಬೇಕಷ್ಟೆ.

ಗುರುವಯ್ಯೂರು ದೇವಸ್ಥಾನಪ್ರವೇಶಕ್ಕೆ ಹರಿಜನರನ್ನು ಬಿಡಬಹುದೋ ಎಂಬವಿಷಯ ಆ ದೇವಸ್ಥಾನದ ಸುತ್ತಮುತ್ತಲಿನ ಹತ್ತು ಮೈಲು ವಿಸ್ತೀರ್ಣದಲ್ಲಿರುವ ಜಾತಿ ಹಿಂದೂಗಳ ಓಟು ತೆಗೆದು, ಬಹುಮತದವರು ಕೂಡದೆಂದು ತೀರ್ಮಾನಿಸಿದರೆ ಅಥವಾ ಬಹುಮತದವರು ವಿರೋಧವಿಲ್ಲವೆಂದು ತೀರ್ಮಾನಿಸಿ, ಹಾಗೆ ಬಿಡಲು ಖಾಸೂಸಿನ ಅಡಚಣೆ ಇದ್ದರೆ ತಾನು ಜನವರಿ ೭೦ರಲ್ಲಿ ಉಪವಾಸವನ್ನು ಕೈಕೊಳ್ಳುವದನ್ನು ತತ್ಕಾಲ ಬಾಕಿ ಮಾಡುವೆನೆಂದು ಮಹಾತ್ಮಗಾಂಧಿಯವರು ಸೂಚಿಸಿರುವರು.

ಮಿಸೆಸ್ ಕಸನ್ಸ್‌ರು ಪೂನಾದಲ್ಲಿ ಪ್ರವಾಸ ಮಾಡಿದಾಗ ಮಹಾತ್ಮ ಗಾಂಧಿಯವರನ್ನು ಜೈಲಿನಲ್ಲಿ ಸಂಧಿಸಿ ಜಿನೀವಾದಲ್ಲಿ ನಡೆದ ಇಂಡಿಯಾ ಇಂಟರ್ ನ್ಯಾಷನಲ್ ಕಮಿಟಿಯವರ ಭಕ್ತಿಪುರಸ್ಕರ ಅಭಿನಂದನೆಗಳನ್ನು ಮಹಾತ್ಮರಿಗೆ ತಿಳುಹಿ ಮಹಾತ್ಮರು ಉಪವಾಸ ಪ್ರಕರಣವು ಪಾಶ್ಚಿಮಾತ್ಯರಲ್ಲಿ ಎಂಥಾ ಪರಿಣಾಮಕಾರಿಯಾಗಿದೆಯೆಂದೂ ಹಿಂದೂಗಳಿಗೂ ಹರಿಜನರಿಗೂ ಅದರ ತೀರ್ಮಾನದ ಬಗ್ಗೆ ಅವರಿಗೆ ಎಷ್ಟು ಸಂತೋಷವನ್ನುಂಟುಮಾಡಿತೆಂದೂ ತಿಳಿಸಿದರು. ಮಲಬಾರಿನಲ್ಲಿ ಮುಖ್ಯವಾಗಿ ಹೆಂಗಸರ ಭಾರತೀಯ ಸಂಘದವರು ನಡಿಸಬೇಕಾದ ಕಾರ್ಯಕ್ರಮವನ್ನು ಮಹಾತ್ಮರಿಂದ ಪಡೆದರು.

ಹೂದ ಚಾಧುರಿ ಎಂಬ ೨೦ ವರ್ಷದ ಯುವಕನು ಲೈಸೆನ್ಸಿಲ್ಲದೆ ೫೨ ಗುಂಡುಗಳನ್ನು ಒಂದು ರಿವಾಲ್ವರನ್ನೂ ಮತ್ತು ಎರಡು ಬಾಂಬುಗಳನ್ನೂ ಇಟ್ಟಿದ್ದನೆಂತಲೂ, ಇವನ ಮನೆಯನ್ನು ಪೊಲೀಸಿನವರು ಆಕ್ಟೋಬರ್ ೧೫ನೇ ತಾರೀಕಿನಲ್ಲಿ ಹುಡುಕಿದಾಗ ಸರ್ಕಾರಿ ನೌಕರರನ್ನು ಕೊಲ್ಲಬೇಕೆಂತಲೂ, ಅದಂಲ್ಲೂ ಯೂರೋಪಿಯನ್ನರನ್ನು ಸಿಕ್ಕಿದ ಕಡೆ ಕೊಂದು ಅವರ ಆಸ್ತಿಪಾಸ್ತಿಗಳನ್ನು ದೋಚಬೇಕೆಂದೂ, ಇದ್ದ ಎರಡು ಹಸ್ತ ಲಿಖಿತಪತ್ರಗಳು ಸಿಕ್ಕಿದುವೆಂದೂ, ಈ ಯುವಕನ ವೇಲೆ ಅಪಾದನೆ ಹೊರಿಸಿ ಅಲಿಪುರದ ಸ್ಪೆಷ್ಯಲ್ ಜಡ್ಜರಾದ ಮೆ. ಟಿ. ಹೆಚ್. ಎಲಿಸರ ಎದುರಿಗೆ ವಿಚಾರಣೆಗಾಗಿ ನಿಲ್ಲಿಸಿದರು. ಹುಡುಗನು ತಾನು ತಪ್ಪಿತಸ್ಥನಲ್ಲವೆಂದು ಹೇಳಿದನು. ಸ್ಪೆಷ್ಯಲ್ ಜಡ್ಜರು ಎಕ್ಸ್‌ಪ್ಲೋಸಿವ್ ಆಕ್ಟಿನ ಪ್ರಕಾರ ಯುವಕನಿಗೆ ೧೦ ವರ್ಷ ಕಾರಾಗೃಹವಾಸವನ್ನು ವಿಧಿಸಿದರು.

'ಇಂಡಿಯಾ ಲೀಗಿ'ನ ಲಂಡನ್ನಿನ ಆಂಗ್ಲೇಯ ಸದಸ್ಯರು ಹಿಂದೂ ದೇಶದ ಸಂಚಾರವನ್ನು ಮುಗಿಸಿ ಲಂಡನ್ನಿಗೆ ಹೋಗಿ ತಿಳಿಸಿದುದರ ಸಾರಾಂಶವಿಷ್ಟು:—'ಇಂಡಿಯದಲ್ಲಿ ವೀರಶೈವ ಮತದ ವಿಕಟರೂಪವು ದೃಗ್ಗೋಚರವಾಗುತ್ತಿದೆ. ಕಾಂಗ್ರೆಸಿನವರ ಕಡೆಗೆ ಪ್ರಜಾವರ್ಗದ ಅಧಿಕಾಂಶದವರು ಒಲಿದಿರುವರೆಂಬುದು ಸುಸ್ಪಷ್ಟ. ದಬ್ಬಾಳಿಕೆ ವಿಪರೀತವಾಗಿದೆ. ಸಿ. ಐ. ಡಿ. ಗಳ ಕಾಟ ಸಹಿಸಲಶಕ್ಯವಾದಂತಿದೆ. ಎಲ್ಲ ಆಂಗ್ಲೇಯರ ಹಿತಾಹಿತಗಳು ಗಾಂಧಿಜೀಯವರ ಕೈಯಲ್ಲಿದೆ. ಅವರೇ ಈಗ ಇಂಡಿಯದ ಅತೀ ವಿಚಕ್ಷಣ ಪೊಲೀಸನೆನ್ನಬಹುದು. ಆದರೂ ವೈಸರಾಯರು,—೧೫ ವರ್ಷ ಹಿಂದೆ ಇದ್ದುದಕ್ಕಿಂತ ಈಗ ಇಂಡಿಯದವರ ಆರ್ಥಿಕ ಸ್ಥಿತಿಯು ನೂರು ಮಡಿ ಸುಧಾರಿಸಿದ್ದು, ನೂರು ಮಡಿ ಸಂತೋಷದಿಂದಿರುವರು ಎಂದು ನುಡಿಯುವರು! ರೌಂಡ್ ಟೇಬಲ್ ಕಾನ್ಫರೆನ್ಸಿನ ಕಡೆಗೆ ಯಾರಿಗೂ ಆಸ್ಥೆಯೂ ಇಲ್ಲ; ಪ್ರತಿನಿಧ್ಯವು ತಮ್ಮದಲ್ಲವೆಂದೇ ಪ್ರಜಾವರ್ಗಕ್ಕೆ ಅಷ್ಟು ಅನಾಶಕ್ತಿ.

'ಕೊಡಗು' ಕಂಪೆನಿಯ ಜನರಲ್ ಮೀಂಗು.

'ಕೊಡಗು' ಲಿಮಿಟೆಡ್ ಕಂಪೆನಿಯ ಶೇರುದಾರರ ಜನರಲ್ ಮೀಟಿಂಗು ತಾ. 26—11—32ರಲ್ಲು ವೀರಾಜಪೇಟೆಯಲ್ಲಿ ನಡೆಯಿತು. ಮೆ. ಸಿ ಯನ್. ವೆಂಕಪ್ಪಯ್ಯನವರು ಅಧ್ಯಕ್ಷರಾಗಿದ್ದರು. 17 ಶೇರುದಾರರು ಹಾಜರಿದ್ದರು.

1. ಕಂಪೆನಿಯ ಡೈರೆಕ್ಟರುಗಳ 1931—32ನೇ ವರ್ಷದ ವರದಿಯು ಚರ್ಚಿಸಲಾಯಿತು.

(ಎ) ವರದಿಯ 9ನೇ ಪುಟದ 4ನೇ ಏಟಮಿನಲ್ಲಿ ಕಾಣುವ 0—0—9 ವ್ಯತ್ಯಾಸವನ್ನು ವಿವರಿಸಿ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ನಿಶ್ಚೈಸಲಾಯಿತು.

(ಬಿ) ಇನ್ನು ಮುಂದೆ ಸ್ಟೇತನರಿಯ ಸ್ಟಾಕ್ ಲೆಕ್ಕವನ್ನು ವರದಿಯಲ್ಲಿ ನಮೂದಿಸಬೇಕೆಂದು ಸೂಚಿಸಲಾಯಿತು.

2. '1931—32ನೇ ವರ್ಷದ ಆಡಳಿತ ವರದಿಯನ್ನೂ, ಇದೇ ವರ್ಷದ ಆದಾಯ ವೆಚ್ಚ, ಬ್ಯಾಲೆನ್ಸ್ ಶೀಟ್, ಲಾಭ ನಷ್ಟಗಳ ಪಟ್ಟಿಗಳನ್ನೂ ಈ ಸಭೆಯು ಒಪ್ಪುತ್ತದೆ' ಎಂಬ ಠರಾವನ್ನು ಮೆ. ಅಜ್ಜನಮಾಡ ಮಾದಪ್ಪನವರು ಸೂಚಿಸಿದರು.

ಮೆ. ವಾರ್ವಂಗಡ ಅಚ್ಚಯ್ಯನವರು ಅನುಮೋದಿಸಿದರು.

ಠರಾವು ಸರ್ವಸಮ್ಮತದಿಂದ ಮಂಜೂರಾಯಿತು.

3. 1932—33ನೇ ವರ್ಷಕ್ಕೆ ಮೆ ಬಿ ಶ್ಯಾಮಣ್ಣನವರನ್ನು ಆಡಿಟರಾಗಿ ನೇಮಿಸುವಂತೆ ಮೆ. ಐ ಸಿ. ಸುಬ್ಬಯ್ಯನವರು ತಂದ ಠರಾವು ಮೆ. ಐ. ಪಿ. ಕಾರ್ಯಪ್ಪನವರಿಂದ ಅನುಮೋದಿಸಲ್ಪಟ್ಟು ಬಹುಮತದಿಂದ ಪಾಸಾಯಿತು.

4 ಆಡಿಟರ್ ಮೆ. ಬಿ. ಶ್ಯಾಮಣ್ಣನವರಿಗೆ 1931—32ನೇ ವರ್ಷಕ್ಕೆ ರೂ. 60/ನ್ನು ಆಡಿಟ್ ಫೀಜಾಗಿ ಕೊಡಬಹುದಾಗಿ ಮೆ. ಐ ಸಿ. ಸುಬ್ಬಯ್ಯನವರು ಸೂಚಿಸಿದರು. ಮೆ. ಮನೆಯಪಂಡ ಚಿಣ್ಣಪ್ಪನವರಿಂದ ಅನುಮೋದಿಸಲ್ಪಟ್ಟು ಸರ್ವ ಸಮ್ಮತದಿಂದ ಪಾಸಾಯಿತು,

5. ಮೆ ಐ ಪಿ. ಕಾರ್ಯಪ್ಪನವರು ಮೆ ಗಳಾದ ಐ. ಸಿ. ಸುಬ್ಬಯ್ಯನವರು, ಯಂ. ಯಂ. ಸಿದ್ದೀಕ್‌ರವರು, ಯು. ಯಂ. ಮೂಜಯ್ಯನವರು ಮತ್ತು ಕೆ. ಕುಶಾಲಪ್ಪನವರನ್ನು ಮುಂದಿನ ಡೈರೆಕ್ಟರುಗಳನ್ನಾಗಿ ಚುನಾಯಿಸಬೇಕೆಂತ ಸೂಚಿಸಿದರು. ಮೆ. ಪಿ. ಗಣಪತಿಯವರು ಅನುಮೋದಿಸಿದರು. ಮೇಲಿನ 6 ಹೆಸರುಗಳಿಗೆ ಬೇಲೆಟ್ ತೆಗೆದಲ್ಲು ಮೆ. ಐ ಸಿ. ಸುಬ್ಬಯ್ಯನವರು, ಯಂ. ಯಂ. ಚಿಣ್ಣಪ್ಪನವರು. ಯಂ. ಯಂ. ಸಿದ್ದೀಕ್‌ರವರು, ಕೆ. ಸಿ. ಕರುಂಬಯ್ಯನವರು ಮತ್ತು ಕಂಜೆತಂಡ ಕುಶಾಲಪ್ಪನವರು ಬಹುಮತದಿಂದ ಚುನಾಯಿಸಲ್ಪಟ್ಟರು ಮತ್ತು ಡೈರೆಕ್ಟರುತನದಿಂದ ನಿವೃತ್ತಿ ಹೊಂದಿದ ಮೆ. ಉದಿಯಂಡ ಮಾಯ್ಯನವರಿಗೆ ಮೆ. ವೆಂಕಪ್ಪಯ್ಯನವರು ವಂದನೆಯನ್ನರ್ಪಿಸಿದರು.

ನಂತರ ಅಧ್ಯಕ್ಷರಿಗೆ ವಂದನೆಗಳಿಂದ ಎಂಟಿಂಗು ಅಂತ್ಯಗೊಂಡಿತು.

ಸಿ. ಯನ್. ವೆಂಕಪ್ಪಯ್ಯ,
(ಕಾರ್ಯಾಧ್ಯಕ್ಷರು)

॥ ಓಂ ॥

ಮಡಿಕೇರಿ ವೇದಾಂತ ಸಂಘದವರು ಇದೇ ಡಿಸಂಬರ್ ತಾರೀಕು 8 ರಲ್ಲು "ಗೀತಾಜಯಂತಿ" ಉತ್ಸವವನ್ನು ಮು. ರಾ. ಆರ್. ಹೆಚ್. ಶಣೈ ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲು ಜಮೊನ್ದಾರರ ಸಂಘದ ಹಾಲ್‌ನಲ್ಲು ಜರಗಿಸುತ್ತಾರೆ. ಈ ಉತ್ಸವಕ್ಕೆ ಸರ್ವರೂ ಪಾಯವೂಡಿಸಬೇಕಾಗಿ ಕೋರುತ್ತೇವೆ.

ಕಾರ್ಯಕ್ರಮ.

ಡಿಸೆಂಬರ್ 8ನೇ ಗುರುವಾರ.

ಪೂರ್ವಾಹ್ನ 9ರಿಂದ 10 ಗಂಟೆ ವರೆಗೆ ಗೀತಾ ಪಠನ ಸ್ಪರ್ಧೆ.

ಸಾಯಂಕಾಲ.

6ರಿಂದ 6.30ರ ವರೆಗೆ ಭಜನೆ.

6.30ರಿಂದ 7.30ರ ವರೆಗೆ ಗೀತೆಯನ್ನು ಕುರಿತು ಮೆ. ತೇಲಪಂಡ ಕಾರ್ಯಪ್ಪ ಬಿ. ಎ. ಇವರ ಕನ್ನಡ ಉಪನ್ಯಾಸ.

7.30ರಿಂದ 8ರ ವರೆಗೆ ಅಧ್ಯಕ್ಷರ ಭಾಷಣ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ.

ಮಡಿಕೇರಿ,
ತಾ. 1—12—1932.

ಹಿ. ಯಂ. ಚಿಣ್ಣಪ್ಪ,
(ಸಂಘದ ಅಧ್ಯಕ್ಷ.)

ಪತ್ರವ್ಯವಹಾರ.

[ಚಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಸ್ತ್ರೀಯರ ಉದ್ಯೋಗ.

ಅಯ್ಯಾ,

ಪ್ರತಿಯೊಬ್ಬನೂ ಅವನವನ ಕರ್ತವ್ಯವನ್ನು ಸಮಯಕ್ಕನುಸಾರವಾಗಿ ಮಾಡಿಕೊಂಡು ಬರಬೇಕು. ಅವನು ಯಾವ ಕೆಲಸವನ್ನು ಕೈಕೊಂಡಿರುತ್ತಾನೋ ಅದೇ ಅವನ ಉದ್ಯೋಗವು (Duty). ಅವನು ಅದರಲ್ಲಿ ದುರಂಧರನಾಗಿರಬೇಕು. ಇದೇ ಅವನಿಗೆ ಲಕ್ಷಣವಾಗಿರುವುದು. ಈ ವಿಷಯವನ್ನು ತಿಳಿಯದೆ ತಪ್ಪು ಅರ್ಥ ಮಾಡಿಕೊಂಡದ್ದರಿಂದಲೇ ನಮ್ಮ ದೇಶದ ಹೆಂಗಸರೂ ಸಹ ತಮಗೊಂದು ಉದ್ಯೋಗವಾಗಬೇಕೆಂದು ತಿಳಿದು ಈಗೀಗ ಸರ್ಕಾರಿ ಉದ್ಯೋಗವನ್ನು ಕೈಕೊಂಡಿರುವರು. ಹೀಗೆ ಹೆಂಗಸರು ಸಹ ಸರ್ಕಾರಿ ಉದ್ಯೋಗಕ್ಕೆ ಅಪೇಕ್ಷಿಸುವುದು ನಮ್ಮ ದೇಶದ ಅಧೋಗತಿಗೆ ಎಂದು ಹೇಳಿದರೆ ಅಲ್ಪೋಕ್ತಿಯಾಗಲಾರದು.

ಇದು ಹೇಗೆಂದರೆ—ಗಂಡಸರೇ ಈಗ ಸರ್ಕಾರಿ ಉದ್ಯೋಗವನ್ನು ಕೈಕೊಂಡು ರುಚಿಯನ್ನು ಚೆನ್ನಾಗಿ ಅನುಭವಿಸಿದ್ದಾರೆ. ಅದೇ ಈಗ ಗುಲಾಮರನ್ನಾಗಿ ಮಾಡಿ ದೇಶವು ಗುಲಾಮಗಿರಿಯಲ್ಲಿದೆ. ಇದರೊಟ್ಟಿಗೆ ಇನ್ನು ಹೆಂಗಸರು ಸರ್ಕಾರಿ ಉದ್ಯೋಗವನ್ನು ಕೈಕೊಂಡರೆ ಮತ್ತೆ ಜಾಸ್ತಿ ಹೇಳುವುದೇ ಬೇಡ

ಗಂಡಸರು ಯಾವಾಗಲೂ ಹೊಂಗೆ ಹೋಗಿ ದುಡಿದು ಸಂಪಾದಿಸಿ ಜೀವನಕ್ಕೆ ಅವಶ್ಯವಿರುವ ಎಲ್ಲಾ ಸಾಮಾನುಗಳನ್ನು ತಂದು ಹಾಕುತ್ತಾನೆ. ಅದನ್ನು ಹೆಂಗಸರು ತಮ್ಮ ಮಕ್ಕಳ ಆಭಿರುಚಿಗನುಸಾರವಾಗಿ ಸಿದ್ಧಪಡಿಸಿಕೊಟ್ಟು ಪ್ರತಿಫಲಕಾಲ ಸಾಯಂಕಾಲಗಳಲ್ಲಿ ದೇವರ ಪೂಜೆ ಮುನಸ್ಕಾರಗಳನ್ನು ಸಹ ಅವಳೇ ಮಾಡಬೇಕು. ಮಕ್ಕಳ ಪೋಷಣೆಯು ಸಹ ಒಲು ಮುಖ್ಯವಾದ ಕಸಬು. ಈ ದಿನದ ಮಕ್ಕಳೇ ಮುಂದಿನ ಜನಾಂಗವಾಗಲಿಕ್ಕಿರುವ ಕಾರಣ ಎಲ್ಲರೂ ಮಕ್ಕಳ ಅಭಿವೃದ್ಧಿಯನ್ನು ನೋಡಿಕೊಳ್ಳುವುದು ಅತ್ಯಾವಶ್ಯಕವಾದ ಕೆಲಸ. ಚಿಕ್ಕ ಮಕ್ಕಳು ತಂದೆಗಿಂತ ತಾಯಿಯ ಹತ್ತಿರವೇ ಹೆಚ್ಚು ಇರುವ ಕಾರಣ ಮಕ್ಕಳನ್ನು ಯಾವ ರೀತಿಯಲ್ಲಿ ತಿದಬೇಕು ಮಾಡಬೇಕೆಂದು ತಾಯಿಯು ಚೆನ್ನಾಗಿ ತಿಳಿದುಕೊಂಡಿರಬೇಕು

ಮಕ್ಕಳಿಗೆ ತಾಯಿಯ ಮೇಲೆಯೇ ಮಮತೆಯೂ, ಪ್ರೇಮವೂ ಹೆಚ್ಚು. ಹೀಗೆ ಅವರು ತಾಯಿಯ ಗುಣಗಳನ್ನೇ (Character) ಕಲಿತುಕೊಂಡು ಜ್ಞಾನಿಗಳಾಗುತ್ತಾರೆ. ಮಕ್ಕಳು ಇತರರು ನಡೆವಂತೆ ನಡೆವ ಸ್ವಭಾವವುಳ್ಳವರು. ಹೆಂಗಸರು ಅಜ್ಞಾನಿಗಳಾಗಿದ್ದರೆ ಮಕ್ಕಳು ಏಳಿಗೆಗೆ ಬರುವುದು ಕಷ್ಟ. ಹೆಂಗಸರು ಸರ್ಕಾರಿ ಉದ್ಯೋಗವನ್ನು ಪಡೆದಿದರೆ ಮಕ್ಕಳೂ ಸಹ ಅವರನ್ನು ಹಿಂಬಾಲಿಸಿ ಕಡೆಗೆ ಏನಾಗುತ್ತದೆಯೆಂಬುದು ಮೇಲೆ ಹೇಳಿದ ರೀತಿ ನಿಮಗೆ ತಿಳಿಯುತ್ತದೆ. ಇದಕ್ಕಿಂತ ಸ್ವದೇಶ ಸೇವೆಯನ್ನು ಕೈಕೊಳ್ಳುವುದು ಬಹಳ ಉತ್ತಮವಾಗಿದೆ. ಒಂದು ದೇಶವು ಏಳಿಗೆಗೆ ಬರಬೇಕಾದರೆ ಪ್ರತಿಯೊಬ್ಬನೂ ಸ್ವದೇಶವನ್ನು ಸಂಸಾರದಂತೆ ಭಾವಿಸಿ, ಪ್ರೀತಿಸುತ್ತಾ ಅದರ ಶ್ರೇಯಸ್ಸಿಗಾಗಿ ಕಷ್ಟವನ್ನು ಅನುಭವಿಸಬೇಕು. ಸ್ವದೇಶದ ವಿಷಯದಲ್ಲಿ ಪ್ರತಿಯೊಬ್ಬನಿಗೂ ಇರಬೇಕಾದ ಇಂಥಾ ಪ್ರೀತಿಗೆ ಸ್ವದೇಶಾಭಿಮಾನವೆಂದು ಹೇಳುವರು. ಸ್ವದೇಶಕ್ಕಾಗಿ ಪ್ರಾಣಗಳನ್ನು ಒಪ್ಪಿಸಿದ ಜನರು ಬಹಳ ಇರುವರು. ಕಳೆದ ಸಾರಿ ದೊಡ್ಡ ಯುದ್ಧದಲ್ಲು ಅನೇಕ ಆಂಗ್ಲೇಯ ವಿದ್ಯಾರ್ಥಿಗಳೂ ಸ್ಕೂಲ್ ಬಿಟ್ಟು ಯುದ್ಧದಲ್ಲಿ ಸೇರಿದರು. ಕಳೆದ ಚೀನಾ ಜಪಾನ್ ಯುದ್ಧದಲ್ಲಿ ಸಹ ಸ್ತ್ರೀಯರೂ ಮಕ್ಕಳೂ ಉದ್ಯೋಗಸ್ಥರೂ ಸಹ ಸೇರಿ ಹೊಡೆದಾಡಿ ಪ್ರಾಣಗಳನ್ನು ಒಪ್ಪಿಸಿದರಿಂದಲೇ ಅವರ ಕಡೆ ಅದ್ಭುತವಾದ ಜಯವುಂಟಾಯಿತು. ಹೀಗೆ ನಮ್ಮ ದೇಶದ ಹೆಂಗಸರೂ ಉದಾಹರಣೆಯನ್ನು ತೆಗೆದುಕೊಂಡು ಸ್ವದೇಶ ಪ್ರೀತಿಗಾಗಿ ಹೋರಾಡುವರೇ ಹೊರತು ಸರ್ಕಾರಿ ಉದ್ಯೋಗಕ್ಕೆ ಗಣನೆ ಮಾಡಲಿಕ್ಕಿಲ್ಲವೆಂದೂ ಅದನ್ನು ಅತೀ ಹೀನ ತರದ್ದಾಗಿ ಎಣಿಸುವರೆಂದೂ ನಂಬುತ್ತೇನೆ. ಅದಲ್ಲದೆ ಎಲ್ಲರಿಗೂ ತಿಳಿದಿರುವಂತೆ ನಮ್ಮ ಹಿಂದೂದೇಶದಲ್ಲಿ ಈಗಿನ ಚಳವಳಿಯಲ್ಲಿ ಸ್ತ್ರೀಯರೇ ಮೇಲಾಗಿದ್ದಾರೆ. ಇದು ಖಂಡಿತವಾಗಿಯೂ ದೇಶೋದ್ಧಾರಕ್ಕಾಗಿದೆ. ಖಂಡಿತವಾಗಿಯೂ ದೇಶವು ರಾಜಕೀಯ ವಿಷಯದಲ್ಲಿ ಸ್ತ್ರೀಯರಿಂದಲೇ ಮುಂದು ಬರುವದಾಗಿದೆ. ಇಂಥಾ ವಿಷಯದಲ್ಲಿ ನಮ್ಮ ಪುಟ್ಟ ದೇಶದಲ್ಲಿ ಸಹ ಸ್ತ್ರೀಯರಲ್ಲಿ ಕೆಲವರು ಈಗಾಗಲೇ ದಾರಿ ತೋರಿಸಿಕೊಟ್ಟಿದ್ದಾರೆ. ಇನ್ನು ಮುಂದಕ್ಕೂ ಸಹ ಇವರು ಬಹಳ ಉತ್ಸೇಜನದಿಂದ ಕೆಲಸ ಮಾಡಿ ದೇಶವನ್ನು ಮುಂದಕ್ಕೆ ತರಲು ಪ್ರಯತ್ನಿಸುವರೆಂದೂ ತಿಳಿಯಬಹುದು ಹೀಗೆಯೇ ಇನ್ನು ಮುಂದಕ್ಕೂ ಇವರು ಸಂಘಗಳನ್ನು ಅಭಿವೃದ್ಧಿಗೊಳಿಸುತ್ತಾ ಸ್ವಜನಾಭಿಮಾನ, ಸ್ವದೇಶಾಭಿಮಾನಗಳೆಂಬ ಉಚ್ಚತಮವಾದ ಕಾರ್ಯಗಳಲ್ಲಿ ಉಪಯೋಗಿಸುತ್ತಾರೆಂಬುದಾಗಿ ನಂಬುತ್ತೇನೆ.

ಬಿ. ಸಿ. ಜೋಲುಪ್ಪೆ.

ಮಾನವನ ಮುಖ್ಯ ಕರ್ತವ್ಯ.

ಸ್ನೇಹನೀಯರೇ,

ಪ್ರಪಂಚದಲ್ಲಿ ಪ್ರತಿಯೊಬ್ಬನೂ ಯಾವದಾದರೊಂದು ಕೆಲಸವನ್ನು ತೊಡಗುವ ಮೊದಲು ಭಗವದ್ಧ್ಯಾನವನ್ನು ಮಾಡುವುದು ಸರ್ವರಿಗೂ ವಿದಿತವಾದ ವಿಷಯವಾಗಿದೆ. ಪ್ರತಿಯೊಬ್ಬನಿಗೂ ಇಂಥಾ ಕೆಲಸವನ್ನು ಮಾಡಿದರೆ ಪುಣ್ಯ, ಇಂಥಾದ್ದನ್ನು ಮಾಡಿದರೆ ಪಾಪವೆಂಬ ಅರಿವು ಇದ್ದರೂ, ಕೆಲವರು ಅದಷ್ಟು ಪಾಪಕೃತ್ಯಗಳನ್ನೇ ಮಾಡಿ ಅದರಿಂದ ತಮಗೆ ನಿತ್ಯ ಸುಖ ದೊರೆಯುವುದೆಂಬ ಹುಚಿಕೆಯಲ್ಲಿದ್ದಾರೆ. ಇದಕ್ಕೆ ಮುಖ್ಯವಾಗಿ ಭಗವಂತನಲ್ಲಿ ಭಯವಿಲ್ಲದಿರುವುದೂ, ತನ್ನಲ್ಲಿ ವಿಶ್ವಾಸವಿಲ್ಲದಿರುವುದೂ, ಅನ್ಯರಲ್ಲಿ ಪ್ರೀತಿ ಇಲ್ಲದಿರುವುದೂ ಕಾರಣವಾಗಿದೆ. ಇಷ್ಟಕ್ಕೂ ಮೂಲ ಯಾವುದೆಂದರೆ:—ಅವರಿಗೆ (1) ಸರಿಯಾದ ಶಿಕ್ಷಣ ಇಲ್ಲದಿರುವುದು, (2) ಸಜ್ಜನ ಸಹವಾಸವಿಲ್ಲದಿರುವುದು, (3) ಸದ್ಗ್ರಂಥಗಳಲ್ಲಿ ಅಭಿರುಚಿ ಇಲ್ಲದಿರುವುದು. ಗ್ರಾಮಾಂತರಗಳಲ್ಲಿ ವಾಸಿಸುವ ಜನರಿಗೆ ಮೊದಲನೆಯ ಎರಡು ವಿಧದಲ್ಲಿ ಅನುಕೂಲ ದೊರೆಯದಿದ್ದರೂ ಮೂರನೆಯದಾದರೂ ಸದ್ಗ್ರಂಥಗಳು ದೊರಕುವುದರಲ್ಲಿ ಎಷ್ಟು ಮಾತ್ರವು ಅನುಮಾನವಿಲ್ಲ. ಆದರೂ ಬಡಪಾಯಿಯಾದವರು ಅಂಥಾ ಪುಸ್ತಕಗಳನ್ನೆಲ್ಲಾ ತಂದು ಓದುವುದು, ಇಲ್ಲವೆ ಓದಿಸಿ ಕೇಳುವುದೆಂದರೆ ಅಷ್ಟೊಂದು ಹಣವನ್ನು ಎಲ್ಲಿಂದ ತರಬೇಕು? ಆದುದರಿಂದ ಸರ್ವ ವಿಷಯಗಳನ್ನೊಳಗೊಂಡಿರುವ ಭಗವದ್ಗೀತೆಯನ್ನು ದಿನ ಪಹಿ ಮುಂಜಾನೆ ಸಾಯಂಕಾಲಗಳಲ್ಲಿ ಸ್ವಲ್ಪ ಸ್ವಲ್ಪವಾಗಿ ಪ್ರತಿ ಒಬ್ಬ ಗೃಹಸ್ಥನೂ, ಗೃಹಿಣಿಯೂ, ಹೆಚ್ಚೇಕೆ, ಪ್ರತಿಯೊಬ್ಬ ಮಾನವನೂ ಪಠಿಸುತ್ತಾ ಬಂದರೆ ತನ್ಮಲ್ಲಿರುವ ದುರ್ಗುಣಗಳೆಲ್ಲಾ ದೂರ ಸಾರಿ "ಉರಿಯುವ ಕೆಲಕ್ ತಣ್ಣವ ತಕ್ಕ್" ಎಂಬಂತೆ ಕೆಟ್ಟ ದಲ್ಲಿರುವವನಿಗೆ ಅಪ್ಪ ಒಂದುವಿನಂತಿ ಸರೂಢಾನ ಕೊಡುತ್ತಾ, ತಿಳುವಳಿಕೆಯು ಹೆಚ್ಚೀರಿ, ಮಾಡಿದ ಪಾಪವೆಲ್ಲಾ ನಶಿಸಿಹೋಗಿ, ದೇವರಲ್ಲಿ ಭಯವೂ, ತನ್ನಲ್ಲಿ ವಿಶ್ವಾಸವೂ, ಅನ್ಯರಲ್ಲಿ ಪ್ರೀತಿಯೂ, ಇಹದಲ್ಲಿ ಇಷ್ಟವೂ, ಪರದಲ್ಲಿ ಮೋಕ್ಷವೂ ಉಂಟಾಗುವಂತೆ ಮಾಡುವುದೇ ಒದರಲ್ಲಿ ಎಳ್ಳಷ್ಟೂ ಅನುಮಾನವಿಲ್ಲ. ಈಗ ಮೇಲೆ ಹೇಳಿದ ಭಗವದ್ಗೀತೆಯ ವಿಷಯದಲ್ಲಿ ನಾನೊಂದೆರಡು ಪೂತುಗಳನ್ನು ಬರೆಯುತ್ತೇನೆ. ನನ್ನ ಕೊಡಗು ದೇಶದಲ್ಲಿ ಪುರಾತನ ಕಾಲದಿಂದ ಬಂದ "ದುಡಿಕೊಟ್ಟ್ ಪಾಟ್" ಅಲ್ಲದೆ ಈಗಿನ ಶೃಂಗಾರಪೂರಿತವಾದ ಗಾನಗಳ್ಯಾವುದೂ ಇರಲಿಲ್ಲ. ಇತ್ತೀಚೆಗೆ ಮೆ. ಅಪ್ಪನೆರವಂಡ ಅಪ್ಪಚ್ಚನವರು ಬಹಳ ಶ್ರದ್ಧೆಯಿಂದ ಬರೆದ 3—4 ನಾಟಕ ಪುಸ್ತಕಗಳನ್ನು ನಮ್ಮ ಕೊಡಗು ಸಹೋದರರನೇಕರು ಓದಿಹುದು. ಅಲ್ಲದೆ ಬೇರೆ ಬೇರೆ ದೇವಂಗತರಾದ ಮೆ. ಪಾಂಡಂಡ ಮುತ್ತಣ್ಣನವರು ಹೆಚ್ಚು ಶ್ರಮವಹಿಸಿ ನಮ್ಮ ಸಹೋದರರ ಹಿತಕ್ಕಾಗಿ ಬರೆದಿರುವ (1) ಕೊಡಗಿನ ಕೈಪಿಡಿ, ಕೊಡಗು ಮತ್ತು ಕೊಡಗರು (Coorg and the Coorgs), (3) ನವನಾಗರಿಕತೆಯ ಪರಿಣಾಮ. (4) ಕುಲವೃದ್ಧಿ ಸ್ವರ್ಗದಾಗಮನ, ಎಂಬ ಪುಸ್ತಕಗಳಿಂದ ಕೊಡಗು ಸಹೋದರರಿಗೆ ತಮ್ಮ ದೇಶ, ತಮ್ಮ ಮತ, ತಮ್ಮ ನಡತೆಯ ವಿಚಾರವಾಗಿ ಎಷ್ಟೋ ತಿಳುವಳಿಕೆಯುಂಟಾಗಿರಬಹುದು. ಅಲ್ಲದೆ ಕೈಲಾಸವಾಸಿ ನಡಿಕೇರಿಯಂಡ ಚಿಣ್ಣಪ್ಪನವರು ಪರಿಹಸವೇ ಸ್ವಸುಖವೆಂದು ಭಾವಿಸಿ ಕನ್ನಡ ಭಾಷೆಯಲ್ಲಿಯೂ, ಆಂಗ್ಲೇಯ ಭಾಷೆಯಲ್ಲಿಯೂ ಬರೆಯಲ್ಪಟ್ಟ ಭಗವದ್ಗೀತೆಯನ್ನು ಕೊಡವ ಭಾಷೆಗೆ ತರ್ಜುಮೆ ಮಾಡಿ ಅದಕ್ಕೆ "ಭಗವಂತಂಡ ಪಾಟ್" ಎಂಬುದಾಗಿ ಹೆಸರು ಕೊಟ್ಟು ಸರ್ವರೂ ಓದಲು ಅನುಕೂಲಿಸುವಂತೆ ಸುಲಭ ಶೈಲಿಯಲ್ಲಿ ಬರೆದು ಪ್ರಕಟಿಸಿರುವ ಈ ಪುಸ್ತಕವನ್ನು, ತಿಲಕ ಮಹರಾಜರು ವಗೈರೆಯವರು ಬರೆದಿರುವ ಗೀತರಹಸ್ಯವೆಂಬ ಪುಸ್ತಕ ವಗೈರೆಗಳನ್ನು ತಂದು ಓದಿ, ಅರ್ಥಮಾಡಲು ಸಾಧ್ಯವಿಲ್ಲದ ಪ್ರತಿಯೊಬ್ಬ ಕೊಡಗು ಮಹನೀಯನು ದಿನವಹಿ ಮುಂಜಾನೆ ಸಾಯಂಕಾಲ ಸ್ವಲ್ಪ ಸ್ವಲ್ಪವಾಗಿ ಪಠಿಸುತ್ತಾ ಬಂದರೆ ಅದರಿಂದ ಮಾನವನ ಮುಖ್ಯ ಕರ್ತವ್ಯವನ್ನು ಮಾಡಿದಂತಾಗುವುದಲ್ಲದೆ ಬುದ್ಧಿ ಶಕ್ತಿಯು ಹೆಚ್ಚಿ ಸಂಸಾರವೆಂಬ ನಾವೆಯನ್ನು ಸುಖವಾಗಿ ಸಾಗಿಸಿಕೊಂಡು ಹೋಗಲು ಬಹಳ ಮಟ್ಟಿಗೆ ಸಹಾಯ ಮಾಡುತ್ತದೆ.

ಒಂದಾನೊಂದು ವೇಳೆ ನಾನೊಂದು ಗ್ರಾಮದ ಕಡೆಗೆ ಹೋಗಿದ್ದಾಗ್ಯೆ ಅಲ್ಲಿ ಒಬ್ಬ ಮಹನೀಯರು ರಾತ್ರಿ ಊಟ ತೀರಿಸಿಕೊಂಡು 'ಅಯ್ಯೋರ್ ತಕ್ಕಂಡ ಓಣಿ ಪಣಿಯೆ" ಎಂದು ವಗೈರೆ ಹಾಡುತ್ತಿದ್ದರು. ಅದರ ಒಡಲು ಅದೇ ರಾಗದಲ್ಲಿ ಗೀತವನ್ನು ಹಾಡಿದ್ದರೆ ದೇವರ ನಾಮ ಸ್ಮರಣೆ ಮಾಡಿದುದು ಮೂರ್ತವಲ್ಲದೆ ಆ ಮೂಲಕ ಮನಸ್ಸಿಗೆ ಉಂಟಾಗುತ್ತಿದ್ದ ದೈವಿಕಾನಂದವು ಹಾಡಿದವರಿಗೂ, ಕೇಳಿದವರಿಗೂ ಉಂಟಾಗುತ್ತಿತ್ತು. ಒಂದಾವರ್ತಿ, ಉತ್ತರ ಹಿಂದೂಸ್ಥಾನಕ್ಕೆ ಸ್ವರ್ಗಸ್ಥರಾದ ರಾವ್‌ಬಹಾದ್ದೂರ್ ಕೋದಂಡ ಅಪ್ಪಯ್ಯನವರು ಹೋಗಿದ್ದ ವೇಳೆಯಲ್ಲಿ ಅಲ್ಲಿ ಅವರು ಒಬ್ಬ ಗಾಡಿಯವನಲ್ಲಿಯೂ ಸಹ ಗೀತದ ಪುಸ್ತಕ ನೋಡಿದ್ದೇನೆಂಬುದಾಗಿ ಅವರು ಕೆಲವು ಸಂದರ್ಭದಲ್ಲಿ ಭಾಷಣ ಮಾಡಿದರು. ಹೀಗಿರುವಲ್ಲಿ ಒಂದೇ ಒಂದು ರೂಪಾಯಿ ಕ್ರಯ ಬಾಳುವ ಈ ಅಮೂಲ್ಯ ಪುಸ್ತಕವನ್ನು ಸರ್ವರೂ ಹೊಂದಿಕೊಂಡು ಓದಿ ಅದರಿಂದ ಮನುಷ್ಯನ್ಯಾವನು, ಅವನ ಕರ್ತವ್ಯವೇನು ಎಂದು ತಿಳಿದುಕೊಂಡು ಸುಖಿಗಳಾಗಬೇಕೆಂದು ಕೋರುತ್ತೇನೆ. ಇತರ ಭಾಷೆಗಳಲ್ಲಿ ಬರೆದಿರುವ ಭಗವದ್ಗೀತೆಗೆ ಹೆಚ್ಚಿನ ಕ್ರಯ ವಾಕ್ಯವಿಲ್ಲದೆ ಸಾಮಾನ್ಯರಿಗೆ ತಿಳಿದುಕೊಳ್ಳಲು ಸ್ವಲ್ಪ ಕಷ್ಟವಾಗಿರುವುದರಿಂದ ಈ "ಭಗವಂತಂಡ ಪಾಟ್" ಎಂಬ ಪುಸ್ತಕವು ಸರ್ವ ಸಾಮಾನ್ಯವಾದುದಾಗಿರುವುದರಿಂದಲೂ ಕೊಡಗಿನ ಪುಸ್ತಕರತ್ನವು ಬರೆದುದಾಗಿರುವುದರಿಂದಲೂ ಅದನ್ನು ಪ್ರತಿ ಒಬ್ಬ ಕೊಡಗನು ಕೊಂಡುಕೊಂಡು ಉಪಯೋಗಿಸಿದಲ್ಲಿ ಸ್ವಸುಖವನ್ನು ಹೊಂದುವುದು ಮಾತ್ರವಲ್ಲದೆ ದೇಶಸ್ಥ ಗ್ರಂಥಕರ್ತರಿಗೆ ಪ್ರೋತ್ಸಾಹವನ್ನು ಕೊಟ್ಟಂತಾಗುವುದಲ್ಲವೇ. ನಮ್ಮ ದೇಶದಲ್ಲಿ ಅನೇಕ ಗ್ರಂಥಕರ್ತರೇನೂ ಇಲ್ಲ. ಗ್ರಂಥ ಬರೆಯಲು ಶಕ್ತಿ ಇರುವವರು ಇರಬಹುದು; ಆದರೆ ಶ್ರಮ ತೆಗೆದುಕೊಳ್ಳುವವರು ಕಮ್ಮಿ. ಆದ್ದರಿಂದ ನಮ್ಮ ಈ ಪುಟ್ಟ ದೇಶದಲ್ಲಿ ವೇಸತಿಟ್ಟು ಬರೆದ ಪ್ರತಿ ಒಬ್ಬ ಮಹನೀಯರ ಪುಸ್ತಕಗಳನ್ನು ಕೈಪಿಡಿಶ ಮಾಡಿಕೊಂಡು ಆ ಗ್ರಂಥಕರ್ತರಿಗೆ ಪ್ರೋತ್ಸಾಹ ಮಾಡಬೇಕಾಗಿ ನನ್ನ ಕೋರಿಕೆ. ಹಾಗೆ ನಾವು ಪ್ರೋತ್ಸಾಹ ಮಾಡದೆ ಹೋದರೆ ಕೊಡಗು ಮಾತಿನಲ್ಲಿ ಒಂದು ಗಾದೆ ಇದೆ "ನಾಟಂಗ್ ಇರ್ಂಬ್ಡಿಕು, ತಾಂಗ್ ತೌಡ್ಡಿಯೆ" ಎಂಬಂತೆ ಆಗುವುದಲ್ಲವೇ? ಭಾರತ ಭೂವಿಯಲ್ಲಿ ಮಾನವ ವರ್ಗದಲ್ಲಿ ಜನಿಸಿದ ಪ್ರತಿ ಒಬ್ಬನೂ ತನ್ನ ನಿತ್ಯ ಕರ್ತವ್ಯದಲ್ಲಿ ಮೈಮರೆದ ಲನೆಯಿದಾದ ಭಗವನ್ನಾಮಸ್ಮರಣೆಯನ್ನು ಇಂಥಾ ಗ್ರಂಥಗಳ ಮೂಲಕ ದಿನಕ್ಕೆ ಸ್ವಲ್ಪ ಹೊತ್ತಾದರೂ ಮಾಡಿ ತಾನು ಮೋಕ್ಷವೇಕೆ, ತನ್ನ ಇಹೀ ಜನ್ಮಾಂಗವೇ ಶ್ರೇಯೋಭಿವೃದ್ಧಿಯನ್ನು ಪಡೆಯುವಂತೆ ಎಸಗದವನ ಜನ್ಮ ವ್ಯರ್ಥವಲ್ಲವೇ?

ಕೇತಿಯಂಡ ಬೆಳ್ಯಪ್ಪ.

ಹರಿಜನರು ದೇವಸ್ಥಾನ ಪ್ರವೇಶ ಮಾಡುವಿಕೆ.

ಮಾ. ಶ್ರೀ. ಅಕ್ಕರಾಮಶಾಸ್ತ್ರಿಗಳಿಗೆ ಕೆಲವು ಪ್ರಶ್ನೆಗಳು.

ಹರಿಜನರು ದೇವಸ್ಥಾನ ಪ್ರವೇಶ ಮಾಡ ಕೂಡದೆಂದು ಮೆ. ಓಡ್ಲಮನೆ ಅಕ್ಕರಾಮ ಶಾಸ್ತ್ರಿಗಳು ಸಂಸ್ಕೃತದಲ್ಲಿ ಒಂದು ಪದ್ಯವನ್ನು ಮಹಾತ್ಮಗಾಂಧಿಯವರಿಗೆ ಬರೆದಿರುತ್ತಾರೆಂದು ಕೇಳಿದೆನು. ಅವರು ಏನೆಂದು ಬರೆದರೆಂಬುದು ತಿಳಿಯದಿದ್ದರೂ ಆ ವಾದದ ಮುಖ್ಯಾಂಶಗಳು ಗೊತ್ತಿರುವುದರಿಂದ ಮೆ. ಶಾಸ್ತ್ರಿಗಳಿಗೆ ಕೆಲವು ಪ್ರಶ್ನೆಗಳನ್ನು ಕೇಳುವೆನು. ಅವರು ದಯವಿಟ್ಟುಉತ್ತರಿಸಿದರೆ ಇನ್ನೂ ಕೆಲವು ಹೆಚ್ಚಿನ ಪ್ರಶ್ನೆಗಳನ್ನು ಹಾಕುವೆನು. ಅವುಗಳಿಗೆ ಸಮರ್ಪಕವಾದ ಜವಾಬು ದೊರಕಿದರೆ ಮೆ. ಶಾಸ್ತ್ರಿಗಳ ಪರವಾಗಿ ನಾನೂ ಚಳವಳಿಬ್ಬಿಸಬೇಕೆಂದಿರುವೆನು. ಮಹಾತ್ಮಗಾಂಧಿಯವರೂ ಅದಕ್ಕೆ ಒಪ್ಪುವರೆಂದು ನಾನು ದೃಢವಾಗಿ ಹೇಳಬಲ್ಲೆ.

ಪ್ರಶ್ನೆಗಳು.

(1) ದೇವಸ್ಥಾನದಲ್ಲಿ ಅಶುದ್ಧವೆಂಬುವುದು ಆದರೆ ಅದರಿಂದ ನಮಗೆ ಉಂಟಾಗುವ ಪರಿಣಾಮವೇನು? ದೇವರು ಮೂರ್ತಿಯನ್ನು ತ್ಯಜಿಸಿ ಹೋಗಿಬಿಡುವನೇ? ಹಾಗಾದರೆ ಅವನು ಸರ್ವಾಂತರ್ಯಾಮಿಯೂ ಅಲ್ಲದನೇ? ದೇವರು ಮೂರ್ತಿಯಲ್ಲಿರುವಷ್ಟೇ ಅದರ ಹೊರಗೂ ಇರುವನೇ, ಇಲ್ಲವೇ?

(2) ಜನರಲ್ಲಿ ಶುದ್ಧ ಮತ್ತು ಅಶುದ್ಧರೆಂಬುವುದನ್ನು ಹೇಗೆ ನಿರ್ಣಯಿಸಬಹುದು? ಹುಟ್ಟಿನಿಂದ ಶುದ್ಧಾಶುದ್ಧ ನಿರ್ಣಯ ಮಾಡುವುದು ಹೇಗೆ? ಬ್ರಾಹ್ಮಣ ಹೆಂಗಸಿಗೆ ಹುಟ್ಟಿದ ಪ್ರತಿಯೊಬ್ಬನೂ ಬ್ರಾಹ್ಮಣನಿಗೇ ಹುಟ್ಟಿದ್ದಿಂದು ಹೇಳುವುದು ಹೇಗೆ? ಮಲ ಮೂತ್ರಗಳು ಶುದ್ಧವೇ ಅಶುದ್ಧವೇ ಬ್ರಾಹ್ಮಣರ ಶರೀರದಲ್ಲಿ ಮಲವಿದ್ದಾಗ ಅವರು ಶುದ್ಧ ಹೇಗೆ?

(3) ದೇವರು ಸರ್ವಾಂತರ್ಯಾಮಿಯೇ, ಅಲ್ಲವೇ? ಬ್ರಾಹ್ಮಣರ ಶರೀರದಲ್ಲಿ ಮಲ ಮೂತ್ರಗಳುಂಟೋ ಇಲ್ಲವೇ? ಅವರಿಂದ ಬ್ರಾಹ್ಮಣರು ದೇವಸ್ಥಾನವನ್ನು ಪ್ರವೇಶಿಸಿದ ಕೂಡಲೆ ದೇವರು ಮೂರ್ತಿಯನ್ನು ಬಿಟ್ಟು ಹೋಗುವನೇ, ಇಲ್ಲವೇ? ಬ್ರಾಹ್ಮಣ ಮತ್ತು ಹರಿಜನರ ಮಲ ಮೂತ್ರಗಳಿಗೆ ಇರುವ ವ್ಯತ್ಯಾಸವೇನು?

(4) ಶರೀರವನ್ನು ತ್ಯಜಿಸಿದ ಕೂಡಲೆ ಮಲ ಮೂತ್ರಗಳು ಅಶುದ್ಧವಾಗುವುದಾದರೆ ಪೂಜಾರಿಯು ಗರ್ಭಗುಡಿಯಲ್ಲಿ ದುರ್ವಾಯುವು ಬಿಟ್ಟರೆ ಮಹಾ ಪ್ರಸಾದವಾಯಿತೆಂದು ಗರ್ಭಗೃಹವನ್ನು ಶುದ್ಧ ಮಾಡಲು ಎಷ್ಟು ರೂಪಾಯಿ ಖರ್ಚು ಮಾಡುತ್ತಾರೆ? ಆ ದುರ್ವಾಯುಗಳು ಹೋಗಲು ಕಿಟಕಿಗಳೂ ಸಹ ಇಲ್ಲದೆ ಸುತ್ತಲೂ ಆವರ್ಣಗಳಿರುವುದರಿಂದ ಅವುಗಳು ಅಲ್ಲೇ ಇರುತ್ತವೆಂದು ಯೋಚಿಸಬೇಕಾಗಿದೆ. ಸುಗಂಧಗಳನ್ನು ಉರಿಸುವುದು ಈ ಕಾರಣಕ್ಕಾಗಿಯೇ, ಏನು?

(5) ಪದ್ಧತಿ ಅಥವಾ ಆಚಾರಗಳಿಗೇ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕಾದರಾಗಲೀ, ಅಲ್ಪ ಸಂಖ್ಯಾಕ ಅಥವಾ ಬಹು ಸಂಖ್ಯಾಕ ಜನರು ಬಹು ಸಂಖ್ಯಾಕ ಅಥವಾ ಅಲ್ಪ ಸಂಖ್ಯಾಕರನ್ನು ಅವರ ಹಕ್ಕುಗಳಿಂದ ವಂಚಿಸುವುದು ನ್ಯಾಯವೆಂದರಾಗಲೀ (1) ಬಹು ಪೂರ್ವಕಾಲದಿಂದಲೂ ಕಳ್ಳತನ ಮಾಡುವ ಆಚಾರ ಪದ್ಧತಿ ಮತ್ತು ಅನುಭವವುಳ್ಳ ಮತ್ತು (2) ತಾವು ಹಾಗೆ ಮಾಡುವುದು ನ್ಯಾಯವೂ, ದೇವರ ಸಮ್ಮತವಿರುವಂಥಾದ್ದೂ ಎಂದು ಸಂಪೂರ್ಣ ನಂಬುವ, ಕೊರಚ, ಕೊರವ ಮುಂತಾದ ಕಳ್ಳರ ಜಾತಿಗಳನ್ನು ಶಿಕ್ಷಿಸುವುದು ತಪ್ಪಲ್ಲವೇ? ಒಂದಲಿಕೆಯು ಬೇರೊಂದು ಮರದ ಆಹಾರವನ್ನು ತಿಂದು ಜೀವಿಸುವಂತೆ ತಮ್ಮನ್ನೂ ದೇವರು ಆ ರೂಪದಲ್ಲೇ ಮಾಡಿರುತ್ತಾನೆಂದೂ, ಒಂದಲಿಕೆ, ಹೇನು ಮುಂತಾದವುಗಳಿಗೆ ಅವುಗಳಿಗೆ ಆಧಾರವು ತಪ್ಪಿದರೆ ನಶಿಸುವಂತೆ ನಾವೂ ನಶಿಸುತ್ತೇ

ವೆಂದೂ ಅವರು ಭಾವಿಸುತ್ತಾರೆ' ಹಾಗಾದರೆ ಅವರಿಗೆ ಪಿನಲ್ ಕೋಡಿನಲ್ಲಿ ಏನಾಯಿತಿ ಕೊಡಬೇಕಲ್ಲವೇ? ಒಬ್ಬ ವ್ಯಾಪಾರಿಯು ತನ್ನ ಪೂರ್ವಿಕ ತಲೆಯೊಂಕರಗಳಿಂದ ಸುಳ್ಳು ತೂಕ, ಅಳತೆಗಳನ್ನು ಕೊಡುತ್ತಿದ್ದೇವೆಯೆಂಬದನ್ನು ರುಜುವಾತು ಪಡಿಸಿದರೂ, ಒಬ್ಬ ಪೋಲಿಯು ತಾನು ದೊಂಬಿ, ಡಕಾಯಿತಿ ಅತ್ಯಾಚಾರಗಳನ್ನು ನಡಿಸುವವನ ವಂಶಸ್ಥನೆಂಬುವುದನ್ನು ರುಜುವಾತುಪಡಿಸಿದರೂ, ಅವರಿಗೆ ಶಿಕ್ಷೆ ಕೊಡಕೂಡದೆಂದಾಗಲೆಲ್ಲವೇ? ಯಾರಿಗೂ ಯಾವ ನಷ್ಟವನ್ನೂ ಪಡಿಸದೆ ಹರಿಜನರು ದೇವಸ್ಥಾನಗಳನ್ನು ಪ್ರವೇಶಿಸಿದ ಮಾತ್ರಕ್ಕೆ ಬ್ರಾಹ್ಮಣರ ನರ ಸ್ನಾಯುಗಳಿಗೆ ಧಕ್ಕೆಯಾಗುತ್ತದಾದರೆ ಧನ, ಮಾನ ಪ್ರಾಣಗಳಿಗೆ ಕೇಡುಂಟು ಮಾಡಿಯೇ ಜೀವನ ನಡಿಸಬೇಕಾದವರನ್ನೂ ಶಿಕ್ಷಿಸುವುದರಿಂದ ಅವರ ಮಿದುಳುಗಳಿಗೆ ಎಂಥಾ ಧಕ್ಕೆಯುಂಟಾಗದು?

(6) ಬ್ರಾಹ್ಮಣರು ಶ್ರೀ ಶಂಕರಾಚಾರ್ಯರೂ, ರಾಮಾನುಜಾಚಾರ್ಯರುಗಳಿಗೆ ಮುಂಜಿ ಇದ್ದವೇ? ಶ್ರೀ ಶಂಕರಾಚಾರ್ಯರೂ ರಾಮಾನುಜಾಚಾರ್ಯರೂ ತಮ್ಮ ಮತಗಳಿಗೆ ಸೇರಿಸಿದ ಜನರು ಯಾವ ಜಾತಿಯವರಾಗಿದ್ದರು? ಅವರನ್ನು ಬ್ರಾಹ್ಮಣರಾಗಿ ಮಾಡಲು ಮಾಡಿದ ಉಪಾಯಗಳಾವುವು? ದೇವಿ ಪುರಾಣಗಳನ್ನು ಬರೆದವನು ಬ್ರಾಹ್ಮಣನು ಹೌದೇ ಅಲ್ಲವೇ? ಅದರಲ್ಲಿರುವ ನೀತಿಗಳು ಶುದ್ದವೇ ಅಶುದ್ದವೇ? ಆ ಬ್ರಾಹ್ಮಣನನ್ನು ಜಾತಿಯಿಂದ ತೆಗೆದರೇ?

ದೇವರ ಕಾಯಿದೆಗಳನ್ನು ಜ್ಞಾಪಕದಲ್ಲಿಡುತ್ತಾ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ತಾನು ಆ ಕಾಯಿದೆಗಳಿಗೆ ಸರಿಯಾಗಿ ನಡೆಯುತ್ತೇನೆ, ಎಂದರೆ ಪ್ರಕೃತಿಗೂ ಸಮಾಜದ ನೆಮ್ಮದಿಗೂ ಅನುಕೂಲವಾಗಿ ನಡೆಯುತ್ತಾ ಇರುತ್ತೇನೆ, ಎಂದು ಪ್ರತಿ ದಿನವೂ ದೃಢ ಪ್ರತಿಜ್ಞೆ ಮಾಡುವ ಅನುಕೂಲ ಕೊಡುವ ಷ್ಟಕ್ಕೆ ಮಾತ್ರ ದೇವಸ್ಥಾನಗಳ ಇರುವಿಕೆಯು ಉದ್ದೇಶವಾಗಿದೆ. ಕಳೆದ ಕೆಲವು ಶತಮಾನಗಳಿಂದ ವಿದ್ಯೆಗೆ ಹೆಚ್ಚಿನ ಬೆಲೆಯು ದೊರೆತುದಿನಿಂದ ಆ ಉದ್ದೇಶವು ಬದಲಾಗಿದೆ. ಜನರ ಮೂಢ ನಂಬಿಕೆಗಳಿಂದ ಪ್ರಯೋಜನಪಡುವುದಕ್ಕಾಗಿ ವಿದ್ಯೆಗೆ ದೃಶ್ಯ ಮತ್ತು ಅದೃಶ್ಯ ಶಕ್ತಿಗಳುಂಟೆಂದು ನಂಬಿಕೆ ಹುಟ್ಟಿಸಲು ಸುರು ಮಾಡಿ ದುರ್ಜನರು ದೇವಸ್ಥಾನಗಳ ಉದ್ದೇಶಗಳನ್ನು ಇತರ ದಾರಿಗಳಿಗೆ ಆಕರ್ಷಿಸಿದರು. ವ್ಯಕ್ತಿಯು ತನ್ನ ತಪ್ಪುಗಳನ್ನು ಒಪ್ಪಿಕೊಂಡು ಇನ್ನು ಮುಂದಾದರೂ ಅವುಗಳನ್ನು ಮಾಡುವುದಿಲ್ಲವೆಂದು ಪಶ್ಚಾತ್ತಾಪಪಡುವಂತೆ ಮಾಡುವ ಬದಲಾಗಿ ಅವರಿಂದ ತಾವು ಲಾಭ ಪಡೆಯಲು 'ಪೂಜೆ' 'ದಾನ' ಅಥವ 'ಹರಿಕೆ'ಗಳಿಂದ ಅವುಗಳನ್ನು ಪರಿಯುವಂತೆ ಮಾಡಿದರು. 'ಪೂಜೆ' ಎಂದರೆ ತಮ್ಮ ಆರು ಇಂದ್ರಿಯಗಳನ್ನು ತೃಪ್ತವಾಗಿ ಮಾಡುವ ಕರ್ತವ್ಯವಾಗಿ ಮಾಡಿಸಿದರು. ದೃಷ್ಟಿಗೆ ಶೃಂಗಾರ, ಮೂಗಿಗೆ ಸುವಾಸನೆ, ಕಿವಿಗೆ ಸಂಗೀತ, ಬಾಯಿಗೆ ತಿಂಡಿ, ಸ್ಪರ್ಶಕ್ಕೂ, ಆರನೆಯ ಇಂದ್ರಿಯಕ್ಕೂ ವೇಶ್ಯೆಯರು, ಹೀಗೆ ವ್ಯವಸ್ಥೆಯಾಯಿತು. ಪ್ರಕೃತಿಯಲ್ಲಿ ಪೂಜೆಯು ಹೋಗಿ ದೇವತಾ ವಿಗ್ರಹವಿರುವಲ್ಲಿ ಕತ್ತಲೆ ಮಾಡಿದರು. ಈ ಸಂದರ್ಭದ ಕೆಲವು ನಿಜವಾಗಿ ನಡೆದ ಮತ್ತು ನಡೆಯುತ್ತಿರುವ ಸಂಗತಿಗಳನ್ನು ಹೇಳಬಹುದು. ಆದರೆ ಈಗಿನ ವಾದಕ್ಕೆ ಅವು ಅನಾವಶ್ಯಕ. ದೇವಸ್ಥಾನಗಳ ಉದ್ದೇಶವನ್ನು ಬದಲಾಯಿಸಿದ ಕಾಲವು ಈಗಲಾದರೂ ಒಂದಿದೆಯೆಂಬುವುದನು ನಾವು ಕಂಡುಕೊಳ್ಳಬೇಕು. ಸಮಾಜದ ಒಂದು ಭಾಗವನ್ನು ದುಃಸ್ಥಿತಿಯಲ್ಲೂ ಅವಮಾನದ ಸ್ಥಿತಿಯಲ್ಲೂ ಇಡುವುದರ ಪರಿಣಾಮವು ಭಯಾನಕವಾದದು. ಹರಿಜನರು ನಮ್ಮವರಾಗಿಯೇ ಇದ್ದು ನಮ್ಮ ಸಂಗಡ ಸಹಕರಿಸಬೇಕೇ ಬೇಡವೇ? ಅಥವಾ ಮಹಮ್ಮದೀಯ ಮತ್ತು ಕ್ರಿಶ್ಚಿಯನರಾಗಿ ನಮ್ಮ ಮೇಲೆ ಕತ್ತಿ, ಕಟ್ಟ ಬೇಕೇ? ನಮ್ಮವರಾಗಿಯೇ ಇರಬೇಕಾದರೆ ನಮ್ಮ ಹಕ್ಕುಗಳನ್ನು ಅವರಿಗೂ ಕೊಡಬೇಕು.

'ನ್ಯಾಯವಾದಿ'

---

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕ ಕಂಪನಿ ೧೨೮೩

ಜ್ವರದ ಗುಳಿಗೆಗಳು.

ಜಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
(52–16) ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ಇಂಡಿಯಾ ಎಕ್ವಿಟೇಬಲ ಇನ್ಶೂರೆನ್ಸ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 96·6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ದಾಮು ಶಾಯಿ 31% ಮಾತ್ರ.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನೇ.

ವಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಜಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ ಸಿ. ಯಂ. ಪೂವಯ್ಯ,
ಲೇಡಿ ಆರ್ಗನೈಜರ್,
'ಪೂವಯ್ಯ ನಿಲ್ಲ,'
(12—13) ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ಬಟಯರ್ಡ್ ವಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
52–13 ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬಾಂಕ್, ಲಿಮಿಟೆಡ್ ಕೂ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	27,670— 0—0
ಜಮೂಬಂದ ಠೇವಣಾತಿ	—	23,150—13—9
ವಸೂಲಾದ ಕ್ಷೇಮನಿಧಿ	—	45,868—14—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಲ ಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪೈಸಿಡೆಂಟರು,
ಪಟ್ಟಮಾಡ ದೇವೈಯ್ಯನವರು,
ಖಾನ್ ಬಹದ್ದೂರ್.

ಟ್ರೈಜರರ್
ಮನೆಯಪ್ಪಂಡ ಜೈಪ್ಪ
ನವರು.

ಸೆಕ್ರೆಟರಿ
ಸಿ. ಯು. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಕು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಮೆ. ಚಾರಿರ ಮೂದ್ಯಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮೆಯ್ಯನವರು, (ಖಾಜಿಭಂಡಾರ.)

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೂದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಯ್ಯನವರೂ, ನುಶು, ಅರಮಣಮೂಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ. ಜೆ. ಮೂದಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೂಚ್ಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮೂ ಖರ್ಚಿನ ರಿಜಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿಸೆ ವರಪೂಸ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮೊಡಿರುವ 1,78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಮೊರದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ
ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಪೆಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೌ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಜೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾಸ್	ಮಂಡಲೆ	ರಾಯಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ [52—40

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
ಗಿರಿಗಾಂವ, ಮುಂಬಯಿ.

52—47

ಕಾರ್ಡು ಬರೆದರೆ ಉಗಿನ ಕ್ಯಾಟಲಾಗು ಮೂಫಿಯಾಗಿ ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬರ್ಚಿಗಳು, ತೋಟಿಗಳು, ಕೇಪ್ಸುಗಳು, ಮತ್ತು ಮತ್ತು ಬೇಟೆಯ ಎಲ್ಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,
26—13 210 Abdul Rehiman Street, BOMBAY.

Printed & published by P. I. Belliappa at "Kodagu" Press Mercara for "Kodagu" Ltd.